1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ

ಅಧ್ಯಕ್ಷರು :– ವಿತ್ತೀಯ ಕಾರ್ಯಕಲಾಪ

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, Adjournment Motion notice ಕೊಟ್ಟಿದ್ದೇವೆ. ಸರ್ಕಾರದಲ್ಲಿ ಅರಣ್ಯ ಮಂತ್ರಿಗಳಾಗಿರುವ ಮಾನ್ಯ ಯೋಗೇಶ್ವರ್‌ರವರ ಮೇಲೆ ಮೆಗಾಸಿಟಿ ಪ್ರಕರಣದಲ್ಲಿ ಸುಮಾರು 14 ಕೇಸ್‌ಗಳಲ್ಲಿ ಛಾರ್ಜ್‌ಶೀಟ್ ಆಗಿದೆ. ಲೋಕಲ್ ಕೋರ್ಟ್‌ಗಳಲ್ಲಿ ಕೂಡ ಛಾರ್ಜ್‌ಶೀಟ್ ಆಗಿದೆ.

ಅಧ್ಯಕ್ಷರು :– Charge sheet ಆದ ಮೇಲೆ can we discuss here? ಇಲ್ಲಿ ಚರ್ಚೆ ಮಾಡಬಹುದಾ?

ಶ್ರೀ ಸಿದ್ದರಾಮಯ್ಯ :– ಏಕೆ ಮಾಡಬಾರದು?

ಅಧ್ಯಕ್ಷರು :– ಮ್ಯಾಟರ್ ಕೋರ್ಟಿನಲ್ಲಿದ್ದಾಗ,

SRI SIDDARAMAIAH :- He is a minister in the cabinet of the Government.

ಶ್ರೀ. ಎಸ್.ಸುರೇಶ್ ಕುಮಾರ್ :– ನೀವು ಈ Motion ತಂದಿರುವ ಸ್ವರೂಪದ ಬಗ್ಗೆ ನಾವು ಹೇಳುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ನೀವು ಆಮೇಲೆ ಹೇಳಿ. After my preliminary submission, say whatever you want to say. Before allowing me to make a preliminary submission how can you interfere?

ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಸಭಾಧ್ಯಕ್ಷರೆ, Adjournment Motion ತರುವುದಕ್ಕೆ ಇತ್ತೀಚಿನ ಒಂದು ಘಟನೆ ಆಗಿರಬೇಕು. ಇದು ಇತ್ತೀಚಿನ ಘಟನೆ ಅಲ್ಲ. ಬಹಳ ಮುಖ್ಯ ಅಂದ್ರೆ, ಅವರೇ ಹೇಳಿದ ಹಾಗೆ ಸಬ್ ರೂಲ್ (6) ರಲ್ಲಿ 'the motion shall not deal with any matter which is under adjudication by a Court of law having jurisdiction in any part of India' ಎಂದು ಬಹಳ specific ಆಗಿ ಇದೆ. ಈ ಕುರಿತು ಸಿಟಿ ಸಿವಿಲ್ ಕೋರ್ಟಿನಲ್ಲಿ ಇದು ಪೆಂಡಿಂಗ್ ಇರುವುದರಿಂದ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ದಯವಿಟ್ಟು ಚರ್ಚೆಗೆ ಅವಕಾಶ ಕೊಡಬೇಡಿ.

SRI SIDDARAMAIAH: If he wants to subject, let him talk after the preliminary submission, whether it is admissible

or not, whether it is coming within the rule or not, let him say afterwards. Before making preliminary submission ಇವರು ಹೇಗೆ ಹೇಳುವುದಕ್ಕಾಗುತ್ತದೆ? ಚರ್ಚೆ ಮಾಡಬೇಕೇಬೇಡವೇ ಎಂದು ನೀವು ತೀರ್ಮಾನ ಮಾಡಿ. ಅವರು ಆಮೇಲೆ ಹೇಳಲಿ. ಎಲ್ಲಿದೆ ಹಾಗೆ ತೋರಿಸಿ. ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ಅವಕಾಶ ಇಲ್ಲವೆಂದು ಆಮೇಲೆ ಹೇಳಲಿ.

ಅಧ್ಯಕ್ಷರು : – ಸಬ್‌ರೂಲ್ (6) very clear ಆಗಿದೆ.

ಶ್ರೀ ಸಿದ್ದರಾಮಯ್ಯ :– ಏನೆಂದು ಇದೆ?

SRI S. SURESHKUMAR: " The right to move the motion for adjournment of the House for the purpose of discussing a definite matter of urgent public importance shall be subject to the following restrictions." ಅದನ್ನು ದಾಟಿದರೆ ಇವರು ಇಲ್ಲಿ ಮಾಡಬಹುದು. ಮೊದಲನೆಯದು, it is not a recent happening. ಎರಡನೆಯದು, ಅದು adjudication ನಲ್ಲಿದೆ ಆದುದರಿಂದ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಗೆ ಏನೇನು ನಿಬಂಧನೆಗಳು ಇವೆ, ರೂಲ್ 62ರಲ್ಲಿ ಏನೇನು ಹೇಳುತ್ತಾರೆ, ನಿಲುವಳಿ ಸೂಚನೆ ತರುವುದನ್ನು ನಿರ್ಬಂಧಿಸುವುದು ಎಂದು ಇದೆ. "ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವುದಕ್ಕಾಗಿ." Is it not a fact that, ಸುಮಾರು 37 ಕೋಟಿ 9000 ಜನರಿಗೆ ಸೈಟ್ ಕೊಡುತ್ತೇವೆಂದು ಮಾಡಿದ್ದಾರೆ. ದುಡ್ಡು ತೆಗೆದುಕೊಂಡಿದ್ದಾರೆ. ಅದರಲ್ಲಿ 37 ಕೋಟಿ ದುರುಪಯೋಗ ಆಗಿದೆ, misappropriation ಆಗಿದೆ ಮತ್ತು cheating ಆಗಿದೆ, forgery ಆಗಿದೆ, ಎಂದು ಇದೆ. ಅದಾದ ಮೇಲೆ.. .

ಶ್ರೀ ಎಸ್.ಸುರೇಶ್ ಕುಮಾರ್ :– ಸಬ್ ರೂಲ್ (3) ಕೂಡ ಓದಲಿ.

ಶ್ರೀ ಸಿದ್ದರಾಮಯ್ಯ :– ಸಾರ್ವಜನಿಕರು ದೂರು ಕೊಟ್ಟಿದ್ದಾರೆ. Is it not a matter of public importance?

ಶ್ರೀ ಎಸ್.ಸುರೇಶ್ ಕುಮಾರ್ :– ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಾನು ಪ್ರತಿ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದು. . .

ಅಧ್ಯಕ್ಷರು :– ನಮ್ಮ ನಿಯಮದಲ್ಲಿ there are restrictions.

ಶ್ರೀ ಸಿದ್ದರಾಮಯ್ಯ :– ನಮ್ಮ ನಿಯಮವನ್ನೇ ನಾನೂ ಓದುತ್ತಿರುವುದು. ಓದುತ್ತೇನೆ ಆಮೇಲೆ ಹೇಳಿ. Preoccupied ಆದರೆ ಬಹಳ ಕಷ್ಟ.

ಅಧ್ಯಕ್ಷರು:– Occupied ಎನ್ನುವ ಪ್ರಶ್ನೆ ಬರುವುದಿಲ್ಲ. Because the mater is pending before the court.

SRI SIDDARAMAIAH : - I request your good-self, don't be preoccupied, ಅವರು ಹೇಳಿಬಿಡುತ್ತಾರೆ, ನೀವು ಹೀಗೆ ಹೇಳಿದರೆ ಹೇಗೆ? ನಾನು ಹೇಳುತ್ತೇನೆ ಆಮೇಲೆ ಹೇಳಿ ನೀವು.

ಶ್ರೀ ಎಸ್.ಸುರೇಶ್‌ಕುಮಾರ್:– ಪ್ರತಿ ಪಕ್ಷದ ನಾಯಕರೆ, ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೂ ಕೂಡ ಒಂದಷ್ಟು ನಿಯಮಗಳಿವೆ. ನೀವು ಸಬ್‌ರೂಲ್ 3 ನ್ನು ಓದಿ.

ಶ್ರೀ ಸಿದ್ದರಾಮಯ್ಯ :– ನೀವು ಕುಳಿತುಕೊಂಡರೆ ನಾನು ಓದುತ್ತೇನೆ. ಸುಮ್ಮನೆ ಓದಿ ಎಂದು ಹೇಳುತ್ತೀರಿ. ಆದರೆ ನೀವು ಕುಳಿತುಕೊಳ್ಳುವುದಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ :– ಮಾನ್ಯ ಅಧ್ಯಕ್ಷರೆ, ಇದನ್ನು ಸಬ್‌ಮಿಷನ್ ಮಾಡಲು ದಯವಿಟ್ಟು ಅವಕಾಶವಿಲ್ಲ.

ಶ್ರೀ ಸಿದ್ದರಾಮಯ್ಯ :– ಸಬ್‌ರೂಲ್ 3 ರ ಪ್ರಕಾರವೇ ಹೇಳುತ್ತೇನೆ. ದಿನಾಂಕ: 23–02–2012 ರಲ್ಲಿ ಚಾರ್ಜ್‌ಶೀಟ್ ಹಾಕಿರತಕ್ಕಂಥದ್ದು, Is it not a recent occurrence?

ಅಧ್ಯಕ್ಷರು : – ಅಲ್ಲ it cannot be adjudicated. . .

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಇದೆಯಲ್ಲಾ, ಈ ದೇಶದಲ್ಲಿ ಎಲ್ಲಿಯೂ ಕೂಡ ಈ ರೀತಿ ನಡೆಯುವುದಿಲ್ಲ.

ಶ್ರೀ ಸಿ.ಪಿ.ಯೋಗೇಶ್ವರ್ :– ಮಾನ್ಯ ಅಧ್ಯಕ್ಷರೆ, ಅವರು ಸದನಕ್ಕೆ ಮಿಸ್‌ಗೈಡ್ ಮಾಡುತ್ತಿದ್ದಾರೆ. ನನ್ನ ಮೇಲೆ ಯಾವುದೇ ಚಾರ್ಜ್‌ಶೀಟ್ ಇಲ್ಲ. ಕೇವಲ ಅದೊಂದು ಪ್ರೈವೇಟ್ ಕಂಪ್ಲೇಟ್. ಉದ್ದೇಶಪೂರ್ವಕವಾಗಿ ರಾಜಕೀಯ ದುರುದ್ದೇಶದಿಂದ ಕೊಟ್ಟಿರತಕ್ಕಂಥ ಕಂಪ್ಲೇಂಟ್ ಆಗಿದೆ. ಅದು ಚಾರ್ಜ್‌ಶೀಟ್ ಅಲ್ಲ. ಆದರೆ ಅವರು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:– ಆಮೇಲೆ ಇದರಲ್ಲಿ ರಾಜಕೀಯ ಉದ್ದೇಶವಿದೆಯೋ ಅಥವಾ ಇಲ್ಲವೋ ಎಂಬುದನ್ನು ಚರ್ಚೆ ಮಾಡುವ ಸಮಯದಲ್ಲಿ ನೋಡೋಣ. ಸರ್ಕಾರ ಆಮೇಲೆ ಇದರಲ್ಲಿ ರಾಜಕೀಯ

ಉದ್ದೇಶವಿದೆ, whether it is politically motivated ಎಂದು ಆಮೇಲೆ ಹೇಳಲಿ ನೋಡೋಣ. ಇವೆಲ್ಲಾ ಚರ್ಚೆಯಾದ ಮೇಲೆ ಹೇಳಲಿ ನೋಡೋಣ.

ಶ್ರೀ ಸಿ.ಪಿ.ಯೋಗೇಶ್ವರ್ :– ಸುಳ್ಳು ಹೇಳಬೇಡಿ ನೀವು, ಚಾರ್ಜ್‌ಶೀಟ್ ಎಂದು ಅದರಲ್ಲಿ ಎಲ್ಲಿದೆ? ಸುಳ್ಳು ಹೇಳಬೇಡಿ.

ಶ್ರೀ ಸಿದ್ದರಾಮಯ್ಯ :– ಚಾರ್ಜ್‌ಶೀಟ್ ಅದು ಹೇಗೆ ಎಂಬುದನ್ನು ನಾವು ತೋರಿಸುತ್ತೇವೆ ಸ್ವಾಮಿ. ನೀವು ಕುಳಿತುಕೊಳ್ಳಿ ಸ್ವಾಮಿ.

ಶ್ರೀ ಸಿ.ಪಿ.ಯೋಗೇಶ್ವರ್ :– ಅದು ಚಾರ್ಜ್‌ಶೀಟ್ ಅಲ್ಲ. ಸುಮ್ಮನೆ ಸುಳ್ಳು ಏಕೆ ಹೇಳುತ್ತಿದ್ದೀರಿ. ಯಾರೋ ಒಬ್ಬನ ಮಾತು ಕೇಳಿಕೊಂಡು ನೀವು. .

ಶ್ರೀ ಸಿದ್ದರಾಮಯ್ಯ :– ಯಾರೋ ಒಬ್ಬನ ಮಾತು ಕೇಳಿಕೊಂಡು ಹೇಳುವುದಕ್ಕೆ ನಾವೇನು ಮಕ್ಕಳೆ? ನಾವೇನು ಮಕ್ಕಳೇನ್ರಿ?

ಶ್ರೀ ಸಿ.ಪಿ.ಯೋಗೇಶ್ವರ್ :– ಚಾರ್ಜ್‌ಶೀಟ್ ಎಂದು ಎಲ್ಲಿದೆ?

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಸ್ವಲ್ಪ ಯೋಗೇಶ್ವರ್‌ಗೆ ತಾವು ಹೇಳಿ. ನೀವು ದಯಮಾಡಿ ನಾವು ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಬೇಕು. Please allow me to make a preliminary submission. Afterwards, whatever the Government wants to say, let the Government say.

ಅಧ್ಯಕ್ಷರು :– ನೀವು ರೂಲ್ ನೋಡಿ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, 1994 ರಲ್ಲಿ ಒಂದು ಮೆಗಾಸಿಟಿ ಪ್ರಾಜೆಕ್ಟ್‌ಗೆ ಪ್ರಾರಂಭ ಮಾಡಿದ್ದಾರೆ. ಯೋಗೇಶ್ವರ್‌ರವರು, ಅವರ ಧರ್ಮಪತ್ನಿ, ಮತ್ತೆ. . .

ಶ್ರೀ.ಎ.ರಾಮದಾಸ್ :– ಮಾನ್ಯ ಅಧ್ಯಕ್ಷರೆ, ಪ್ರಿಲಿಮನರಿ ಸಬ್‌ಮಿಷನ್‌ಗೇ ಪ್ರಾವಿಷನ್ ಇಲ್ಲವೆನ್ನುವಂಥಹ ವಿಚಾರವನ್ನು ನಾವು ಹೇಳುತ್ತಿದ್ದೇವೆ.

ಶ್ರೀ.ಆರ್.ಅಶೋಕ್(ಗೃಹಸಚಿವರು):–ಪ್ರಿಲಿಮನರಿ ಸಬ್‌ಮಿಷನ್‌ಗೇ ಅವಕಾಶವಿಲ್ಲವೆಂದು. . .

ಶ್ರೀ ಸಿದ್ದರಾಮಯ್ಯ : – ಎಲ್ಲಿದೆ ಆ ರೀತಿ? ನೀವೆಲ್ಲೋ ಓದಿಬಿಟ್ಟು ಈ ರೀತಿ ಹೇಳಿದರೆ ಹೇಗೆ? ಏನ್ ಹಾಗಾದರೆ ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಬೇಡವೇನ್ರಿ? Do you think that he should continue in the Government even after committing so many offences and the

charge sheet is submitted before the court? ನನಗೇಕೋ ನಿಮ್ಮದು ಅರ್ಥವಾಗಲಿಲ್ಲ ನನಗೆ. ಈ ರೀತಿಯಾದರೆ ಹೇಗೆ? ನೀವು ಹೀಗೆ ಹೇಳುವುದಾದರೆ ಸರ್ಕಾರಕ್ಕೆ ಕ್ರಿಮಿನಲ್ ಕೇಸ್ ಇರುವವರನ್ನೆಲ್ಲ ಸೇರಿಸಿಕೊಂಡು ಬಿಡಲಿ.

ಅಧ್ಯಕ್ಷರು : – ಚರ್ಚೆ ಮಾಡಬಾರದು ಎಂದು ನಾನು ಹೇಳಲಿಲ್ಲ. ಆದರೆ Adjournment Motion ನಲ್ಲಿ ಬರುವುದಿಲ್ಲವೆಂದೆ. ನೀವು ಬಜೆಟ್ ಮೇಲೆ ಮಾತನಾಡುವಾಗ ಇದನ್ನು ಬೇಕಾದರೆ ನೀವು ರೆಫರ್ ಮಾಡಿ ಮಾತನಾಡಬಹುದು.

ಶ್ರೀ ಸಿದ್ದರಾಮಯ್ಯ :– ಹಾಗಾದರೆ 11 ಜನ ಸಚಿವರುಗಳ ಏಕೆ ರಾಜೀನಾಮೆ ಕೊಟ್ಟರು ಹೇಳಿ. Why they have resigned as ministers from your cabinet?

ಅಧ್ಯಕ್ಷರು : – ನೋಡಿ ಚರ್ಚೆ ಮಾಡಬಾರದು ಎಂದು ನಾನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, ನೀವು ನಮಗೆ allow ಮಾಡುತ್ತೀರೋ ಇಲ್ಲವೋ ಹೇಳಿ.

ಅಧ್ಯಕ್ಷರು :– ಈ ವಿಷಯದ ಬಗ್ಗೆ ಚರ್ಚೆ ಮಾಡಬಾರದು ಎಂದು ನಾನು ಹೇಳಲಿಲ್ಲ. ಬಜೆಟ್ ಮೇಲೆ ಮಾತನಾಡುವಾಗ ಕೂಡ ಇದರ ಬಗ್ಗೆ ಹೇಳುವುದಕ್ಕೆ ample ಅವಕಾಶವಿದೆ. ಆದರೆ Adjournment Motion ನಲ್ಲಿ ಇದು ಬರುವುದಿಲ್ಲ because of sub rule (6). ನಾನು ಅಷ್ಟನ್ನೇ ಹೇಳಿದ್ದು.

ಶ್ರೀ ಸಿದ್ದರಾಮಯ್ಯ :– sub-rule 6 ನಲ್ಲಿ ಏನು ಹೇಳಿದೆ ಸ್ವಾಮಿ ಹೇಳಿ.

ಶ್ರೀ.ಡಿ.ಕೆ.ಶಿವಕುಮಾರ್ :– ಮಾನ್ಯ ಅಧ್ಯಕ್ಷರೆ, ನಾವು ಹೇಳುವುದಕ್ಕೆ ಅವಕಾಶ ಕೊಡಿ. ಆಮೇಲೆ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

ಅಧ್ಯಕ್ಷರು :– ತಾವು ಹೇಳುವಾಗಲೇ ಕೋರ್ಟ್‌ನಲ್ಲಿದೆ ಎಂದು ಹೇಳಿದಿರಿ. ಅದಕ್ಕೇ ನಾನು ಹೇಳಿದ್ದು. ನೀವು ಸಬ್‌ಮಿಟ್ ಮಾಡುವಾಗಲೇ ಕೋರ್ಟ್‌ನಲ್ಲಿದೆಯೆಂದು ಹೇಳಿದಿರಿ. ಅದಕ್ಕೇ ನಾನು ಆ ರೀತಿ ಹೇಳಿದ್ದು.

ಶ್ರೀ ಸಿ.ಪಿ.ಯೋಗೇಶ್ವರ್ :– ಮಾನ್ಯ ಸಿದ್ದರಾಮಯ್ಯನವರು ಯಾರದೋ ಪ್ರಚೋದನೆಗೆ ಒಳಗಾಗಿದ್ದಾರೆ.

ಶ್ರೀ ಸಿದ್ದರಾಮಯ್ಯ :– ರೀ, ನಾನು ಯಾರ ಪ್ರಚೋದನೆಗೂ ಒಳಗಾಗಿಲ್ಲಾರಿ.

ಶ್ರೀ ಸಿ.ಪಿ.ಯೋಗೇಶ್ವರ್ :– ನಿಮ್ಮಂಥವರು ಯಾರದೋ ಪ್ರಚೋದನೆಗೆ ಒಳಗಾಗಿ ಮಾತನಾಡಿದರೆ. . .

ಶ್ರೀ ಸಿದ್ದರಾಮಯ್ಯ :– ಇವೆಲ್ಲಾ ಏನು? ಇವೆಲ್ಲಾ ದಾಖಲಾತಿಗಳಲ್ಲವೇನು? ಇವೆಲ್ಲಾ ದಾಖಲಾತಿಗಳಲ್ಲವೇ?

ಶ್ರೀ ಸಿ.ಪಿ.ಯೋಗೇಶ್ವರ್ : – ನನ್ನ ಮೇಲೆ ಯಾವ ಚಾರ್ಜ್‌ಶೀಟ್ ಕೂಡಾ ಈಗ ಹಾಕಿಲ್ಲ. ನಾನು ಈ ಬಾರಿ ಚುನಾವಣೆಯಲ್ಲಿ ಗೆದ್ದು ಬಂದಾಗ. .

ಶ್ರೀ.ಡಿ.ಕೆ.ಶಿವಕುಮಾರ್ :– ಮಾನ್ಯ ಅಧ್ಯಕ್ಷರೆ, ನಾವು ತಮಗೆ ಕೇಳುತ್ತಿದ್ದೇವೆ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ಸರ್ಕಾರದಲ್ಲಿರುವ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. We don't want answer from him.

ಶ್ರೀ ಸಿದ್ದರಾಮಯ್ಯ :– ನೋಡಿ ಸ್ವಾಮಿ, ಇದೇನು ಚಾರ್ಜ್‌ಶೀಟ್ ಅಲ್ಲವೆ?

ಶ್ರೀ ಸಿ.ಪಿ.ಯೋಗೇಶ್ವರ್ :– ಚಾರ್ಜ್‌ಶೀಟ್ ಅಲ್ಲ.

ಅಧ್ಯಕ್ಷರು :– That's why Adjourment Motion is restricted.

ಶ್ರೀ ಸಿದ್ದರಾಮಯ್ಯ :– ಪೊಲೀಸ್‌ನವರು ಫೈಲ್ ಮಾಡಿದ್ದಾರೆ. ಕೋರ್ಟ್‌ನಲ್ಲಿ ಸಬಿಮಿಟ್ ಮಾಡಿದ್ದಾರೆ.

ಅಧ್ಯಕ್ಷರು :– ಅದಕ್ಕಾಗಿಯೇ ನಾನು ಹೇಳುತ್ತಿರುವುದು you cannot raise under Rule 60 ಎಂದು.

ಶ್ರೀ ಸಿದ್ದರಾಮಯ್ಯ :– ಇವೆಲ್ಲವೂ ಚಾರ್ಜ್‌ಶೀಟ್‌ಗಳೇ ಆಗಿವೆ.

ಅಧ್ಯಕ್ಷರು :– ಅದಕ್ಕೇ ನಾನು ಹೇಳಿದ್ದು. ರೂಲ್ 7 ಓದಿ.

ಶ್ರೀ ಸಿದ್ದರಾಮಯ್ಯ :– ರೂಲ್ 7 ಅನ್ನೇ ನಾನು ಓದುತ್ತಿದ್ದೆ. ನೀವು ಓದುವುದಕ್ಕೇ ಬಿಡುವುದಿಲ್ಲವಲ್ಲ. ರೂಲ್ 61 ರಲ್ಲಿ ಸಬ್‌ರೂಲ್ 7 ನಲ್ಲಿರುವಂತೆ, ಸಂವಿಧಾನದ ಮೇರೆಗೆ ಅಥವಾ ಈ ನಿಯಮಗಳ ಮೇರೆಗಿನ ಯಾವುದೇ ಪ್ರಶ್ನೆ ಎತ್ತುವ ಅಥವಾ ನಿಲುವಳಿ ಸೂಚನೆ ಇರತಕ್ಕದ್ದಲ್ಲ. ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ನೋಟೀಸ್ ಕೊಡುವುದು ನಾವು ನೋಟೀಸ್ ಕೊಟ್ಟಿದ್ದೇವಲ್ಲ ಸ್ವಾಮಿ.

ಅಧ್ಯಕ್ಷರು : – ರೂಲ್ 7 ಓದಿ.

ಶ್ರೀ ಸಿದ್ದರಾಮಯ್ಯ :– ರೂಲ್ 7 ಅನ್ನೇ ನಾನು ಹೇಳುತ್ತಿರುವುದು.

ಅಧ್ಯಕ್ಷರು : – ಕೋರ್ಟ್‌ನಲ್ಲಿದೆಯೆಂದು ತಾವೇ ಹೇಳುತ್ತಿದ್ದೀರಲ್ಲ. ಕೋರ್ಟ್‌ನಲ್ಲಿದೆಯೆಂದು ತಾವೇ ಹೇಳಿದ್ದಕ್ಕಾಗಿ ನಾನು ಆ ರೀತಿ ಹೇಳಿದ್ದು.

ಶ್ರೀ ಸಿದ್ದರಾಮಯ್ಯ :– ನಮ್ಮದು ಲಿಮಿಟೆಡ್ purpose ಏನೆಂದರೆ, this House is not going to decide the matter or not going to make decision on the chargesheet. The Cabinet Minister on whom the chargesheet is submitted before the Court of law after an investigation by the Central Government company on offences, ಅದರಲ್ಲಿ Serious Fraud Investigation Agency ಎಂದು ಇದೆ. ಅವರು ಇನ್‌ವೆಸ್ಟಿಗೇಟ್ ಮಾಡಿದ್ದಾರೆ. ಅವರು ಇನ್‌ವೆಸ್ಟಿಗೇಟ್ ಮಾಡಿ ಚಾರ್ಜ್‌ಶೀಟ್ ಚಾರ್ಜ್‌ಶೀಟ್ ಹಾಕಿದ್ದಾರೆ. ಚಾರ್ಜ್‌ಶೀಟ್ ಹಾಕಿ, ಇವರ ಮೇಲೆ ಚಾರ್ಜಸ್‌ಗಳು ಪ್ರೂವ್ ಆಗಿದೆಯೆಂದು ಹೇಳಿ ಚಾರ್ಜ್‌ಶೀಟ್‌ನಲ್ಲಿ ಹೇಳಿದ್ದಾರೆ. ಆ ಸಬ್ಜೆಕ್ಟ್ ಆಮೇಲೆ ಮತ್ತೆ ಕೋರ್ಟ್‌ನಲ್ಲಿ ಎವಿಡೆನ್ಸ್ ಆಗಬೇಕು, ಪ್ರೂವ್ ಆಗಬೇಕು, it is a different aspect, subject to further proof. Now, an investigation agency after investigating into the matter, ther have submitted the chargesheet.

ಶ್ರೀ ಸಿ.ಪಿ.ಯೋಗೇಶ್ವರ್ :– ಚಾರ್ಜ್‌ಶೀಟ್ ನನ್ನ ಮೇಲೆ ಹಾಕಿಲ್ಲ. ಅದನ್ನೇ ನೀವು ಆಗಿನಿಂದಲೂ ಹೇಳುತ್ತಿದ್ದೀರಿ. ನೀವು ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ :– ಎನ್ನುವುದೇ un-parlimentary word ಎಂಬುದು ನಿಮಗೆ ಗೊತ್ತೆ? ಎನ್ನುವುದೇ Un-parlimentary word.

ಶ್ರೀ.ಜಗದೀಶ್ ಶೆಟ್ಟರ್ :– ಸತ್ಯಕ್ಕೆ ದೂರವಾದದು ಎಂದು ಹೇಳಬೇಕು.

ಶ್ರೀ ಸಿದ್ದರಾಮಯ್ಯ :– ಎನ್ನುವುದೇ Un-parlimentary word. ನೀವು ಅವರಿಗೆ ಇದರ ಬಗ್ಗೆ ಸ್ವಲ್ಪ ಹೇಳಿಕೊಡಿ.

ಮಾನ್ಯ ಅಧ್ಯಕ್ಷರೆ ಅವರು ಎನ್ನುವ ಪದವನ್ನು ಪದೇ ಪದೇ ಹೇಳುತ್ತಿದ್ದರೂ ನೀವು allow ಮಾಡುತ್ತಿದ್ದೀರಿ.

ಅಧ್ಯಕ್ಷರು :– ಅದನ್ನು ತೆಗೆಸೋಣ.

ಶ್ರೀ ಸಿದ್ದರಾಮಯ್ಯ :– ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ. ಅವರು ಹೇಳಬೇಕು.

ಶ್ರೀ ಎಸ್.ಸುರೇಶ್‌ಕುಮಾರ್ (ಸಂಸದೀಯ ವ್ಯವಹಾರಗಳ ಸಚಿವರು) :– ವಿರೋಧ ಪಕ್ಷದ ನಾಯಕರೆ, ಎಲ್ಲಾ ಕಡತದಿಂದ ತೆಗೆದು ಹಾಕೋಣ.

ಶ್ರೀ ಸಿದ್ದರಾಮಯ್ಯ :– ನಿಮ್ಮ ಸುಳ್ಳನ್ನು ತೆಗೆದು ಹಾಕಿ. ಏಕೆಂದರೆ ನಾವು ಯಾವಾಗಲೂ ಹೇಳುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾವು ಯಾವಾಗಲೂ ಸತ್ಯವನ್ನೇ ಹೇಳುವುದು. ಏಕೆಂದರೆ ಇಲ್ಲಿ ಸತ್ಯವನ್ನಲ್ಲದೇ ಬೇರೇನೂ ಹೇಳುವುದಿಲ್ಲ. ನಾನು ಹೇಳುವುದೆಲ್ಲಾ ಸತ್ಯವೆಂದು ಇಲ್ಲಿ ಪ್ರಮಾಣ ಮಾಡಿದ್ದೇವೆ. ಎಂದು ಹೇಳುವ ಪ್ರಶ್ನೆಯೇ ಬರುವುದಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ. . .

ಅಧ್ಯಕ್ಷರು : – ಒಂದೇ ಒಂದು ಪಾಯಿಂಟ್ ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ :– ನಮಗೆ ಮೊದಲು ಹೇಳುವುದಕ್ಕೆ ಬಿಡಿ. ನಮಗೆ ಹೇಳುವುದಕ್ಕೇ ಇಡದೇ ಹೋದರೆ ಹೇಗೆ ಸ್ವಾಮಿ? ಪುನ: ನಾವು ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಅಸೆಂಬ್ಲಿ ನಡೆಯದ ಹಾಗೆ ಮಾಡಬೇಕಾಗುತ್ತದೆ. ನೋಡಿ ಈ ತರಹ ಆದರೆ ಚೆನ್ನಾಗಿ ಕಾಣಿಸುವುದಿಲ್ಲ. ನಾವೇನೋ ಸ್ಮೂತ್ ಆಗಿ ಅಸೆಂಬ್ಲಿ ನಡೆಯಲೆಂದು ತಮಗೆ ಅವಕಾಶ ಮಾಡಿಕೊಟ್ಟಿದೀವಿ. ನೀವೇ ಹೇಳಿ ಈ ಬಾರಿ ನಾವೇನಾದರೂ ಗಲಾಟೆ ಮಾಡಿದ್ದೇವೆಯೇ? **ಅಧ್ಯಕ್ಷರು** : – ಇಲ್ಲ.

ಶ್ರೀ ಸಿದ್ದರಾಮಯ್ಯ : – ನೋಡಿ ಎಷ್ಟು ಸ್ಮೂತ್ ಆಗಿ ಅಧಿವೇಶನ ನಡೆದುಕೊಂಡು ಬಂದಿದೆ. ಆದುದರಿಂದ, we are within the rules. Whether it is Rule 61, sub-rule (6) or sub-rule (7) or any rule, we are within the rules. It is a recent occurrence because ದಿನಾಂಕ:23–02–2012 ರಲ್ಲಿ ಚಾರ್ಜ್‌ಶೀಟ್ ಸಬ್‌ಮಿಟ್ ಮಾಡಿರುವುದು. Fraud ನಡೆದಿರುವುದು ಹಿಂದೆಯೇ ಇರಬಹುದು, ಆದರೆ ಚಾರ್ಜ್‌ಶೀಟ್ ಹಾಕಿರುವುದು ಇತ್ತೀಚೆಗೆ. ಆದುದರಿಂದ ಇದು ಇತ್ತೀಚೆಗೆ ನಡೆದ ಘಟನೆ ಆಗಿರುವುದರಿಂದ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕು. ಮಂತ್ರಿಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಅಂಥದ್ದೇನೂ ಇಲ್ಲ. He is a good friend of mine. I have all the respect for him. But unfortunately, ಯಾರೋ ಏನೋ ಹೇಳಿ ಬಿಟ್ಟಿದ್ದಾರೆ, ನೀವು ಹೋಗಿ ಸಿಕ್ಕಿಹಾಕಿಕೊಂ–

ಡುಬಿಟ್ಟಿದ್ದೀರಿ. 37 ಕೋಟಿ ರೂ.ಗಳ misap-propriation ಆಗಿದೆ, ಮೋಸವಾಗಿದೆ, forgery ಆಗಿದೆ ಎಂದು ಈ ರೀತಿ ಇವೆಲ್ಲಾ ಇದೆ. ಆದುದರಿಂದ ನಾನು ಏನು ಹೇಳುತ್ತೇನೆಂದರೆ, ಇದರ ಬಗ್ಗೆ ಚರ್ಚೆ ಮಾಡೋಣ. ಆಮೇಲೆ you take a decision. ಆದುದರಿಂದ please take up this issue. ನೀವು ಬೇಕಾದರೆ ರೂಲ್ 69 ಕ್ಕೆ ಇದನ್ನು convert ಮಾಡಿ, I don't mind. But the question is, it is a serious matter to be discussed on the floor of the House. I am not going to discuss on the merits. ಕೋರ್ಟ್‌ನಲ್ಲೇನಿದೆ, ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಚಾರ್ಜ್‌ಶೀಟ್ ಹಾಕಿರುವುದರಿಂದ ಮಂತ್ರಿಗಳು ಮಂತ್ರಿಮಂಡಲದಲ್ಲಿ ಮುಂದುವರೆಯುವುದು ಸರಿಯೇ? ಅವರು ಮಂತ್ರಿ ಮಂಡಲದಲ್ಲಿ ಇರಬಾರದು. ಅವರು ನಿರಪರಾಧಿಯೆಂದು ಮುಕ್ತರಾಗಲಿ. ನಿರಪರಾಧಿಯೆಂದು ಅವರು ಸರ್ಟಿಫಿಕೇಟ್ ತೆಗೆದುಕೊಂಡು ಬರಲಿ. ಈಗ ನೋಡಿ ಯಡಿಯೂರಪ್ಪನವರು ಏಕೆ ರಾಜೀನಾಮೆ ಕೊಟ್ಟರು? ಹಾಲಪ್ಪನವರು ಏಕೆ ರಾಜೀನಾಮೆ ಕೊಟ್ಟಿದ್ದಾರೆ? ಆಮೇಲೆ, ರಾಮಚಂದ್ರಗೌಡರು ಏಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ? ಕಟ್ಟಾ ಸುಬ್ರಹ್ಮಣ್ಯ ನಾಯ್ಡು ರವರು ಏಕೆ ರಾಜೀನಾಮೆ ಕೊಟ್ಟಿದ್ದಾರೆ? ಕೃಷ್ಣಯ್ಯ ಶೆಟ್ಟಿ ಏಕೆ ರಾಜೀನಾಮೆ ಕೊಟ್ಟಿದ್ದಾರೆ? ಆದುದರಿಂದ ಇವರು ಕೂಡ ರಾಜೀನಾಮೆಯನ್ನು ಕೊಡಬೇಕು. ರಾಜ್ಯಪಾಲರೂ ಕೂಡ ಇವರು ಮತ್ತು

ಇನ್ನೊಬ್ಬ ಮಂತ್ರಿಗಳನ್ನು ಸರ್ಕಾರದಲ್ಲಿ ಇಟ್ಟುಕೊಂಡಿರುವುದೇ ತಪ್ಪು, ರಾಜೀನಾಮೆ ಕೊಡಬೇಕೆಂದು ಹೇಳಿದ್ದಾರೆ. ನಾನು ಅದರ ಆಧಾರದ ಮೇಲೆ ಮಾತನಾಡುತ್ತಿಲ್ಲ. ಸುಮ್ಮನೆ ಅದನ್ನು ಪ್ರಾಸಂಗಿಕವಾಗಿ ಹೇಳಿದ್ದೇನಷ್ಟೆ. ಆದುದರಿಂದ, This is a fit case of recent occurance and public importance. ಬಹಳ ಮಹತ್ತರವಾದಂಥ ಜರೂರು ವಿಷಯ. ಇದರ ಬಗ್ಗೆ ಚರ್ಚೆಯಾಗಬೇಕು. ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳಿ I hope that you are fully convinced. Please allow me to take up and discuss on this matter.

ಶ್ರೀ ಎಸ್.ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, Point of order. . .

ಅಧ್ಯಕ್ಷರು :– ಎಲ್ಲರಿಗೂ preliminary ಯಲ್ಲಿ ಅವಕಾಶವಿಲ್ಲ.

ಶ್ರೀ ಎಸ್.ಎ.ರಾಮದಾಸ್ :– ಮಾನ್ಯ ಅಧ್ಯಕ್ಷರೆ, Point of order, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು raise ಮಾಡಿದರು. ಯಾವ provisionನಲ್ಲಿ premiliminary submission ಇಲ್ಲವೆಂದು kaul and shakdher ನಲ್ಲಿ 546ರಲ್ಲಿ, An Adjournment Motion which seeks to raise discussion on a matter pending before any Statutory Tribunal or Authority of Performing any Judicial or the Quasi-Judicial ಇದು Page No:546, Para No.1 ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಕೂಡಾ Judiciary ಅಥವಾ Quasi-judiciary ಯಲ್ಲಿರುವ matter ಅನ್ನು Adjournment Motionನಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು Kaul and Shakdher ಇದೆ. ಎರಡನೆಯದಾಗಿ, Page No.539 ರಲ್ಲಿ ಯಾವುದೇ ಕಾರಣಕ್ಕೂ Adjournment Motion ಅನ್ನು budget session ನಡೆಯುತ್ತಿರುವಂಥಹ ಸಂದರ್ಭದಲ್ಲಿ, reply ಇರುವಂಥಹ ಸಂದರ್ಭದಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಈ ಎರಡೂ ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಆದುದರಿಂದ, preliminary submission ನ್ನು ಯಾವುದೇ ಕಾರಣಕ್ಕೂ ಇದು sub judice ಆಗಿರುವಂಥ ವಿಚಾರವಾಗಿರುವುದರಿಂದ ಅದನ್ನು ತೆಗದುಕೊಳ್ಳಬಾರದೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಈ ಒಂದು ಪ್ರಶ್ನೆ ಉದ್ಭವವಾಗಿದೆ. ನಿಯಮ 60 ರ ಅಡಿಯಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಬಾರದೆಂದು ಮಾನ್ಯ ಕಾನೂನು ಸಚಿವರು ಹೇಳಿದರು. ಯಾವುದೇ ಸಾರ್ವಜನಿಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾದಾಗ ಸರ್ವೇ ಸಾಮಾನ್ಯವಾಗಿ ನಿಯಮ 60 ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ.

ಅಧ್ಯಕ್ಷರು :– Subject to resolution under 62 ಆದ ಮೇಲೆ ಮಾಡುತ್ತಾರೆ. Any matter that is to be discussed under Rule 60 that is the subject to the restriction imposed under Rule 62. ತಾವು Rule 62 ಬರುವುದಿಲ್ಲವೆಂದು ಹೇಳಿಬಿಡಿ. There is a preliminary Point of Order.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದೆಲ್ಲಾ ತಪ್ಪು ಎಂದು ಆಮೇಲೆ ಹೇಳಿ.

ಅಧ್ಯಕ್ಷರು :– ನನ್ನನ್ನು ಕೇಳಿ, that is different.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಕುರ್ಚಿಯಿಂದ ಏನು ಆದೇಶವನ್ನು ಕೊಡುತ್ತೀರೋ, ಅದಕ್ಕೆ ತಲೆ ಬಾಗಿಸುವಂಥವನು.

ಅಧ್ಯಕ್ಷರು :– ಹಾಗೆ ಹೇಳಿದರೆ ಹೇಗೆ? Point of order ಎತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ :– ನನಗೆ ಕೆಲವು ಅನುಮಾನಗಳಿವೆ. ಈ ವಿಚಾರಗಳನ್ನು Rule 60 – 'Subject to the provisions of these rules, a motion for an adjournment of the business of the House for the purpose of discussing a definite matter of urgent public importance, may be made with the consent of the Speaker.' ನಾವು speaker ರವರ consentಗೋಸ್ಕರ ಒಂದು ಸಾರ್ವಜನಿಕವಾಗಿ ಮಹತ್ವವಾಗಿರುವಂಥ, ವಿಚಾರವೆಂದು ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಸಾರ್ವಜನಿಕವಾಗಿರುವಂಥ, ಗಹನವಾಗಿರುವಂಥ ವಿಚಾರ ಯಾವುದೆಂದು ಹೇಳಿದಾಗ, ಬಹುಶ: ನಾನು ನನ್ನ ಬಾಯಿಯಿಂದ ಹೇಳುವುದಕ್ಕಿಂತ, ಒಂದೇ ಒಂದು ಮಾತನ್ನು ಹೇಳಬೇಕೆನ್ನುವುದಾದರೆ, which is very important ಎನ್ನುವುದಕ್ಕೆ, ಇವತ್ತು, the Members holding a public office should use public resources in such manner as may lead to the public good. Member should keep uppermost in their mind the fundamental duties listed in part-IV-A of the Constitution. Member should maintain high standards of morality, dignity decency and values in public life.

ಶ್ರೀ ಎಸ್.ಸುರೇಶ್ ಕುಮಾರ್ :– Nobody can disagree with that. ಎಲ್ಲರ ಮನಸ್ಸಿನಲ್ಲಿ ಅದು ಇರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ :– ಇದಕ್ಕೆ ಕುತ್ತು ಬಂದಿರುವಂಥಾದ್ದಕ್ಕೆ. .

ಶ್ರೀ ಎಸ್.ಸುರೇಶ್‌ಕುಮಾರ್ :– ಕುತ್ತು ಬಂದಾಗ, ಈಗ ನೀವು Rule 60 ಓದಿದ್ದೀರಿ, I have fully endorsed. ಆದರೆ ಅಲ್ಲಿ ಇರುವುದೇನೆಂದರೆ,

'subject to the provisions of these rules' ಏನು subject ಎಂದು rule 62 ನಲ್ಲಿದೆ.

ಶ್ರೀ ಟಿ.ಬಿ.ಜಯಚಂದ್ರ :– ನಾನು ಇನ್ನು Rule 60 ರಲ್ಲೇ ಇದ್ದೇನೆ. Rule 62 ಕ್ಕೆ ಹೋಗಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ :– ನೀವು ಕೊನೆಯವರೆಗೂ ಹೋಗಲ್ಲ. ನಿಮಗೆ ತೊಂದರೆಯಾಗುವ ರೂಲ್ ಅದು. ನೀವು ರೂಲ್ 60 ಕ್ಕೆ ನಿಂತುಕೊಂಡಿರುತ್ತೀರಿ, ನೀವು ರೂಲ್ 62 ಕ್ಕೆ ಬನ್ನಿ.

ಶ್ರೀ ಟಿ.ಬಿ.ಜಯಚಂದ್ರ :– ನನಗೆ ಮುಂದಕ್ಕೆ ಓದಲು ಅವಕಾಶ ಕೊಟ್ಟ ಮೇಲೆ. . .

ಅಧ್ಯಕ್ಷರು : – ಈಗ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. He has raised a Point of Order also. ಈಗ ಏನೆಂದರೆ, Rule 60 ಯಲ್ಲಿ ಯಾವುದೇ matter ಅನ್ನು raise ಮಾಡಬೇಕೆಂದರೆ 'subject to the rules' ಎಂದು ಇದೆ. Admittedly subject to the rules you read out, I am asking you to please read out Rule 62 ನಲ್ಲಿ sub rule-7 ಇವೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಒಪ್ಪುತ್ತೇನೆ.

ಅಧ್ಯಕ್ಷರು :– Sub Rule 7 ಗೆ ಬಂದರೆ. . .

ಶ್ರೀ ಟಿ.ಬಿ.ಜಯಚಂದ್ರ :– ನಾನು ಅದೆಲ್ಲವನ್ನು ಓದಿದ್ದೇನೆ. ನಾನು ತಮ್ಮ ಕುರ್ಚಿಯಿಂದ ತಮ್ಮ ಆದೇಶವನ್ನು ಕೇಳುತ್ತಿದ್ದೇನೆ. Member should maintain high standards of morality, dignity, decency and values in public life. ಇದಕ್ಕೆ ಚ್ಯುತಿ ಬಂದಾಗ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ. ತಾವು ಎತ್ತರವಾದ ಸ್ಥಾನದಲ್ಲಿ ಕುಳಿತಿದ್ದೀರಿ. Residuary power ನಿಮಗೆ ಇದೆ. ನಿಮಗೆ ಎಲ್ಲಾ ತರಹದ ಅಧಿಕಾರ ಇದೆ. ಇದು ನಾವೇ ಮಾಡಿದಂಥ ರೂಲ್ಸ್. ಈಗ ಸದನದ ಗೌರವಕ್ಕೆ ಚ್ಯುತಿ ಬಂದಂಥ ಸಂದರ್ಭದಲ್ಲಿ ತಾವು ತಮ್ಮ discreationary power ಅನ್ನು ಉಪಯೋಗಿಸದಿದ್ದರೆ ಹೇಗೆ?

ಅಧ್ಯಕ್ಷರು :– ರೂಲ್ಸ್ ಬಿಟ್ಟು ಮಾಡಬೇಕೆಂದರೆ ಹೇಗೆ ಆಗುತ್ತದೆ? That is a different issue. ನಾನು ಇದನ್ನು ಚರ್ಚೆ ಮಾಡಬಾರದೆಂದು

ಹೇಳಲಿಲ್ಲ. I must make it very clear, ನಾನು ಚರ್ಚೆಗೆ ಅವಕಾಶವೇ ಇಲ್ಲ. ಇದನ್ನು ಚರ್ಚೆ ಮಾಡಬಾರದೆಂದು ಹೇಳಿಲ್ಲ. But it is not a subject to be discussed under Rule 60. That is all. ಈಗ ಬಜೆಟ್‌ನಲ್ಲಿ ನೀವು ಮಾತನಾಡಬಾರದೆಂದು ಹೇಳುವುದಿಲ್ಲ.

ಶ್ರೀ.ಸಿದ್ಧರಾಮಯ್ಯ :– ತಾವು ಆಮೇಲೆ ಒಂದು ಆದೇಶವನ್ನು ಮಾಡಿ. Please here our argument.

ಅಧ್ಯಕ್ಷರು : – Priliminary Point of Order ಎತ್ತಿದ್ದಕ್ಕೆ ನಾನು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ :– Let them object. Whatever they want to say, whatever objection they want to make, let them make. Please hear him and afterwards you and pass orders.

ಅಧ್ಯಕ್ಷರು : – ಆಯಿತು.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಏಕೆ ಉದ್ಭವವಾಯಿತೆಂದರೆ, public lifeನಲ್ಲಿ morality, morale is very important, when public morale is in such a state in the State, ಈಗ ಏನಾಗಿದೆಯೆಂದರೆ, ನಾವು ಇಲ್ಲಿ ಆರು ಕೋಟಿ ಜನರಿಂದ ಆಯ್ಕೆಯಾಗಿರುವಂಥ ಪ್ರತಿನಿಧಿಗಳು ಇಲ್ಲಿ ಕುಳಿತಿರುವಂಥವರು, we are exercising the powers of a trustee, we are a public trust. This House is the public trust. We represent 6 crores of people. ನಾವು ಇದರಲ್ಲಿ ಸರ್ಕಾರವೆಂದರೆ ಏನು? ಕರ್ನಾಟಕ ಎಂದರೆ ಏನು? ಮುಖ್ಯಮಂತ್ರಿಗಳು, ಮಂತ್ರಿಗಳು, ಅವರು, they represent the Government, they represent the State, they represent 6 crores people of the State, that is important. ಅವರ public morale ಇವತ್ತು de-rail ಆದಾಗ ಏನು ಅಭಿಪ್ರಾಯ ಬರುತ್ತದೆ? ಆ ಕಾರಣಕ್ಕೋಸ್ಕರ ಇವತ್ತು ಪತ್ರಿಕೆಗಳಲ್ಲಿ ಬರುತ್ತಾ ಇದೆ, ಪತ್ರಿಕೆಗಳಲ್ಲಿ ಏನು ಬರುತ್ತದೆಂಬ ಪ್ರಶ್ನೆಯಲ್ಲ. ಈಗಾಗಲೇ ನಿದರ್ಶನವಿದೆ, ಯಾವ ಕಾರಣಕ್ಕೋಸ್ಕರ ಮಾನ್ಯ ಯಡಿಯೂರಪ್ಪನವರು ರಾಜೀನಾಮೆಯನ್ನು ಕೊಡುವಂಥ ಪ್ರಶ್ನೆ ಬಂತು? It is because of the public morale, ಆದರೆ the BJP High Command,

stated public morale ಹಾಳಾಗುತ್ತಿದೆ ನಮಗೆ ಕಷ್ಟವಾಗುತ್ತಿದೆ, ಆ ಕಾರಣಕ್ಕೋಸ್ಕರ ರಾಜೀನಾಮೆಯನ್ನು ಕೊಡಿ, ಕೋರ್ಟ್‌ನಲ್ಲಿ ಏನು ಬೇಕಾದರೂ ಮಾಡಿಕೊಳ್ಳಿ ಎಂದರು. So, what is important here? Many have resigned. It is only on account of public morale. There ase many instances. ತಮಗೆ ಗೊತ್ತಿರಬೇಕು, ಅಣ್ಣಾ ಹಜಾರೆಯವರು ಇವತ್ತು ಪಾರ್ಲಿಮೆಂಟ್‌ನಲ್ಲಿ ಬೇಕಾದಷ್ಟು ಜನರಿದ್ದಾರೆಂಬ ಮಾತನ್ನು ಕೂಡ ಹೇಳಿದರು. ಅಲ್ಲಿಗೆ when the public is in such state, should the House not discuss this issue? ದಯಮಾಡಿ ಎಲ್ಲಕ್ಕಿಂತಲೂ important, ಮಾನ್ಯ ಅಧ್ಯಕ್ಷರೆ, ಒಂದು ಹೆಣ್ಣಿಗೆ chaste is important.

ಅಧ್ಯಕ್ಷರು :– That is different. ತಾವು Rule 60 ಯಲ್ಲಿ ಹೇಗೆ ಬರುತ್ತದೆಂಬುದನ್ನು ಹೇಳಿ. The particular subject is within the purview of Rule 60. You convince me. That's all. ನೀವು ಅಣ್ಣಾ ಹಜಾರೆ ಎಂದು, ಇನ್ನೊಂದು ಎಂದು. . .

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಾನು ಯಾವ ಕೋರ್ಟ್, ಏನು ಕಥೆ ಎಂದು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : – No. You convince me how this subject is within the purview of Rule 60.

ಶ್ರೀ ಟಿ.ಬಿ.ಜಯಚಂದ್ರ : – ಮಾನ್ಯ ಅಧ್ಯಕ್ಷರೆ, ಈ 365 ನಿಮ್ಮದೆ, ತಮಗೆ ಅಧಿಕಾರವಿದೆ.

ಅಧ್ಯಕ್ಷರು : – ಯಾವ ರೂಲ್ ಇಲ್ಲದಿದ್ದರೆ ಅಧಿಕಾರವಿದೆ.

ಶ್ರೀ ಟಿ.ಬಿ.ಜಯಚಂದ್ರ :– ಈ ಸದನದ ಗೌರವ. . .

ಅಧ್ಯಕ್ಷರು :– ನೀವು ಹಾಗೆ ಹೇಳಿದರೆ, ನಾನು ಒಪ್ಪುವುದಕ್ಕೆ ಆಗುವುದಿಲ್ಲ. When there is no specific provision discretionary power can be used. There are provisions and restrictions. I must follow it.

ಶ್ರೀ ಟಿ.ಬಿ.ಜಯಚಂದ್ರ :– ಈಗ public morale ಹಾಳಾಗಿದೆ.

ಅಧ್ಯಕ್ಷರು :– ಅದನ್ನು Rule 60 ಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ :– ರಾಜ್ಯದ ಜನರು ಅನುಮಾನದಲ್ಲಿ ನೋಡುವಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂಬುದನ್ನು ಹೇಳಿ.

ಅಧ್ಯಕ್ಷರು :– ಚರ್ಚೆ ಮಾಡಿ. ಬಜೆಟ್ ಮೇಲೆ ಮಾತನಾಡುವಾಗಲೇ ಮಾತನಾಡಿ. ಯಾರು ಬೇಡವೆಂದಿದ್ದು.

ಶ್ರೀ ಟಿ.ಬಿ.ಜಯಚಂದ್ರ :– ಈಗಲೇ ಅವಕಾಶ ಕೊಡಿ. ಯಾವ ನಿಯಮದಲ್ಲಿ ಚರ್ಚೆ ಮಾಡಬೇಕೆಂದು ಈಗಲೇ ತೀರ್ಮಾನ ಮಾಡಿ ಹೇಳಿ.

(ಗೊಂದಲ)

ಅಧ್ಯಕ್ಷರು :– ಮಾತನಾಡಿ. ನಾನು ಇದರ ಮೇಲೇ ಆದೇಶ ಮಾಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ :– ಇವರು morality ಬಗ್ಗೆ ಮಾತನಾಡುತ್ತಾರೆ. ಹಾಗೆ ನೋಡಿದರೆ ಪ್ರಧಾನ ಮಂತ್ರಿಗಳೂ ರಾಜೀನಾಮೆ ಕೊಡಬೇಕಾಗುತ್ತದೆ.

ಅಧ್ಯಕ್ಷರು :– ನೀವು ಸಬ್ಜೆಕ್ಟ್‌ನ್ನು raise ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ನಾನು ಹೇಳಲಿಲ್ಲ. But the subject matter does not fall within the ambit and scope of the Rule 60.

ಶ್ರೀ ಟಿ.ಬಿ.ಜಯಚಂದ್ರ :– ತಾವು ನಿಯಮ 60 ರ ಅಡಿಯಲ್ಲಿ ಒಪ್ಪಿಗೆ ಕೊಡುತ್ತಿಲ್ಲ ಎನ್ನುವ ಅಭಿಪ್ರಾಯವನ್ನು ಸೂಚಿಸಿದ ಮೇಲೆ ನಾನು ಹೇಳುತ್ತಿದ್ದೇನೆ, ನಿಮ್ಮ residuary powers exercise ಮಾಡಿ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ನಿಮ್ಮ ಕುರ್ಚಿಗಳನ್ನು ಜನ ಅನುಮಾನದಿಂದ ನೋಡುವಂಥ ಪ್ರಶ್ನೆ ಬಂದಾಗ ನಾವು ಯಾವ ರೂಲ್ಸ್ ಪ್ರಕಾರ ಚರ್ಚೆ ಮಾಡಬೇಕೆಂದು ಈಗಲೇ ಹೇಳಿಬಿಡಿ. ಈಗಲೇ ಚರ್ಚೆಯನ್ನು ಶುರು ಮಾಡೋಣ. ತಾವು ಒಪ್ಪುತ್ತೀರೋ, ಇಲ್ಲವೋ ಹೇಳಿ. ಒಬ್ಬ ಮಂತ್ರಿಯಾಗಿರತಕ್ಕಂಥವರು, ಸರ್ಕಾರವನ್ನು, ಜನರನ್ನು ಪ್ರತಿನಿಧಿಸತಕ್ಕಂಥವರು ಕಳಂಕಿತರಾದಾಗ, ಒಬ್ಬ ಆರೋಪಿಯಾಗಿ ಕೋರ್ಟ್ ಮುಂದೆ ಹೋಗಿ ನಿಂತಾಗ ನಾವು ಏನು ಹೇಳಬೇಕಾಗುತ್ತದೆ.

ಶ್ರೀ ಎಸ್.ರಾಮದಾಸ್ : – ಅವರು ಹೇಳಿದ ರೀತಿಯಲ್ಲೇ ಈಗ cause ಏಕೆ ಬಂದಿದೆ, urgency ಏಕೆ ಬಂದಿದೆ ಎಂದರೆ ನ್ಯಾಯಾಲಯಕ್ಕೆ ಹಾಕಿರುವ ಚಾರ್ಜ್‌ಷೀಟ್, ಅದು ಇದೆಯೋ, ಇಲ್ಲವೋ ಆ ಪ್ರಶ್ನೆ ಬೇರೆ. ಅದರ ಮೇಲೆಯೇ ನಾನು ಸ್ಪಷ್ಟವಾಗಿ ಹೇಳಿದೆ. ಕೌಲ್ ಅಂಡ್ ಶಕ್ದರ್‌ನ ನಿಯಮ 546 ಇರುವುದನ್ನು ಓದಿ ಹೇಳಿದ್ದೇನೆ. ಅದರಲ್ಲಿರುವ ಪ್ರಕಾರ ಸ್ಪಷ್ಟವಾಗಿ ಅಲೋ ಇಲ್ಲ ಎನ್ನುವುದಾದರೆ, Adjournment Motion allow ಇದೆಯೋ, ಇಲ್ಲವೋ ಎನ್ನುವ ಬಗ್ಗೆ ರೂಲಿಂಗ್ ಕೊಡಿ. ಆಮೇಲೆ ಬಾಕಿ ವಿಚಾರವನ್ನು ನೋಡೋಣ.

ಶ್ರೀ ಟಿ.ಬಿ.ಜಯಚಂದ್ರ :– ಮನೆಗೇ ಬೆಂಕಿ ಬಿದ್ದಿದೆ. ಅದನ್ನು ಆರಿಸುವುದು ಹೇಗೆ ಹೇಳಿ. ಆ ವಿಚಾರಕ್ಕೆ ಬನ್ನಿರಿ ಎಂದರೆ ನೀವು ರೂಲ್ಸ್ ಇಟ್ಟುಕೊಂಡು ಕೂತರೆ ಹೇಗೆ? ನೀವು ಏನು ಹೇಳುತ್ತೀರಿ ಎಂದು ನನಗೆ ಗೊತ್ತಿದೆ. ನಾವು ಯಾವ ರೀತಿ raise ಮಾಡಬೇಕೆಂದು ಹೇಳಿ. ಘನತೆ ಗೌರವಕ್ಕೆ ಚ್ಯುತಿ ಬಂದಾಗ ಏನು ಮಾಡಬೇಕೆಂದು ಹೇಳಿ.

ಅಧ್ಯಕ್ಷರು : – ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು.. . . . . .

ಶ್ರೀ ಸಿದ್ಧರಾಮಯ್ಯ :– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ರೂಲಿಂಗ್ ಕೊಡುವುದಕ್ಕೇ ಹೊರಟು ಬಿಟ್ಟಿರಿ.

ಅಧ್ಯಕ್ಷರು : – ಹೇಳಿ.

ಶ್ರೀ ಸಿದ್ಧರಾಮಯ್ಯ :– ವಿಷಯ ನ್ಯಾಯಾಲಯದ ಮುಂದೆ ಇದೆ ಎಂದು ಅವರು objection ತೆಗೆದಿದ್ದಾರೆ. Sub judice ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ರೂಲ್ 62 ಯನ್ನು ನಾನು ತಮ್ಮ ಗಮನಕ್ಕೆ ತರುತ್ತಿದೇನೆ. ಈ ಸದನದಲ್ಲಿ ಅನೇಕ ಸಾರಿ ನ್ಯಾಯಾಲಯಗಳಲ್ಲಿ ಇರತಕ್ಕಂಥ ವಿಚಾರಗಳ ಬಗ್ಗೆಯೂ ಕೂಡ, ಅದು ಟ್ರಿಬ್ಯುಲ್‌ನಲ್ಲಿರಲಿ, ನ್ಯಾಯಾಲಯದಲ್ಲಿರಲಿ, ಬೇರೆ ಬೇರೆ quasi-judicial body ಗಳ ಮುಂದೆ ಇರಲಿ, ಅವೆಲ್ಲವೂ ಇಲ್ಲಿ ಚರ್ಚೆಯಾಗಿವೆ. Proviso 63 ಏನು ಹೇಳುತ್ತದೆ ಎಂದು ನೋಡಿ:

"63, No motion which seeks to raise discussion on a matter pending before any statutory tribunal or statutory authority performing any judicial or quasi-judicial functions or

any commission or court of enquiry appointed to enquire into, or investigate, any matter shall ordinarily be permitted to be moved;

Provided that the Speaker may in his discreation allow such matter being raised in the House as is concerned with the procedure or subject or stage of enquiry if the Speaker is statisfied that it is not likely to prejudice the consideration of such matter by the statutory tribunal, statutory authority, commission or court of enquiry." ಎಂದು ಇದೆ. ನಾವು ಚರ್ಚೆ ಮಾಡುವುದಕ್ಕೆ ಇದರ ಕೆಳಗೆ ಅವಕಾಶ ಕೊಡಿ. ಇದರ ಕೆಳಗೆ ಕೊಡಬಹುದಲ್ಲವೇ? Rule 62, Sub Rule (vi) ಕೆಳಗೆ ಬರುವುದಿಲ್ಲ ಎಂದು ಹೇಳಿದ್ದೀರಿ. ಅದರಲ್ಲಿ ಬೇಡ, ಇದರಲ್ಲಿ ಕೊಡಿ. ಇಷ್ಟರಲ್ಲಿ ಚರ್ಚೆಯನ್ನೇ ಮಾಡಿ ಮುಗಿಸುತ್ತಿದ್ದೇವಲ್ಲ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಈಗಲಾದರೂ ಕೊಡಿ ಅಥವಾ ಸ್ವಲ್ಪ ಹೊತ್ತು ಆದಮೇಲಾದರೂ ಕೊಡಿ. ಆದರೆ ಚರ್ಚೆಯಂತೂ ಆಗಬೇಕು. ನಮ್ಮ ಉಪ ನಾಯಕರು ಏಕೆ ಹೇಳುತ್ತಿದ್ದಾರೆ ಎಂದರೆ, ಅವರು ಒಂದು ಸರ್ಕಾರದಲ್ಲಿರತಕ್ಕಂಥವರು, ರಾಜ್ಯದ ಇಡೀ ಆರು ಕೋಟಿ ಜನ ನಮ್ಮನ್ನು ನೋಡುತ್ತಾರೆ, ಇವರ ಮೇಲೆ ಕ್ರಿಮಿನಲ್ ಕೇಸ್‌ಗಳಿವೆ, ಇವರ ಮೇಲೆ ಚಾರ್ಜ್ ಷೀಟ್ ಫೈಲ್ ಆಗಿದೆ, ಇವರು ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ. . . . .

ಶ್ರೀ ಸಿ.ಪಿ.ಯೋಗೇಶ್ವರ್ :– ಚಾರ್ಜ್ ಷೀಟ್ ಫೈಲ್ ಆಗಿದೆ ಎಂದು ಮತ್ತೆ ಮತ್ತೆ ಏಕೆ ಹೇಳುತ್ತೀರಿ?

ಶ್ರೀ ಸಿದ್ಧರಾಮಯ್ಯ :– ಇದು ಚಾರ್ಜ್‌ಷೀಟ್ ಅಲ್ಲವೇನ್ರಿ?

ಶ್ರೀ ಸಿ.ಪಿ.ಯೋಗೇಶ್ವರ್ :– ಚಾರ್ಜ್‌ಷೀಟ್ ಅಲ್ಲ, ಬರೀ ಕೇಸ್ ಆಗಿದೆ.

ಶ್ರೀ ಸಿದ್ಧರಾಮಯ್ಯ : – ಸ್ವಲ್ಪ ನಾವು ಹೇಳುವವರೆಗೆ ಇರಿ.

ಶ್ರೀ ಸಿ.ಪಿ.ಯೋಗೇಶ್ವರ್ :– ಸಿದ್ದರಾಮಯ್ಯನವರೇ, ನಿಮಗೆ ಮತ್ತು ಜಯಚಂದ್ರರವರಿಗೆ ಏಕೆ ಈ ಅಧೋಗತಿ ಬಂದು ಬಿಟ್ಟಿತು.

ಶ್ರೀ ಸಿದ್ಧರಾಮಯ್ಯ :– ಇದು ನಾನು ತಯಾರು ಮಾಡಿಕೊಂಡು ಬಂದಿರುವುದೇ? ತಮಗೆ ಕೊಡುತ್ತೇನೆ, ಸ್ವಲ್ಪ ನೋಡಿ.

ಶ್ರೀ ಸಿ.ಪಿ.ಯೋಗೇಶ್ವರ್ :– ಅಧ್ಯಕ್ಷರಿಗೆ ಕೊಡಿ, ಅವರು ನೋಡಲಿ. ನಾನೂ ಕಾಪಿಯನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್.ಎ.ರಾಮದಾಸ್ :– Merits of the case ಗೆ ಹೋಗಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ :– Merits of the case ಇಲ್ಲ, ಎಂಥಾದ್ದೂ ಇಲ್ಲ, ಕುಳಿತುಕೊಳ್ಳಪ್ಪ.

ಶ್ರೀ ಸಿ.ಪಿ.ಯೋಗೇಶ್ವರ್ :– ಈ ರಾಜ್ಯದ ಒಬ್ಬ ಮಹಾ ಭ್ರಷ್ಟರನ್ನು ರಕ್ಷಣೆ ಮಾಡುವುದಕ್ಕೆ ನೀವಿಬ್ಬರೂ ಏಕೆ ಹೀಗೆ

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಏನು? ಅಧ್ಯಕ್ಷರೇ, ಎನ್ನುವ ಪದವನ್ನು ಬಳಸಿದ್ದಾರೆ.

(ಗೊಂದಲ)

SRI SIDDARAMAIAH : - What is this? What is he speaking? Don't use all such nonsense. What are you talking?

(ಗೊಂದಲ)

ಅಧ್ಯಕ್ಷರು : – ಅದನ್ನು ಕಡತದಿಂದ ತೆಗೆದು ಹಾಕಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – What you are talking? ಕುಳಿತುಕೊಳ್ರೀ ನೀವು. ಸರ್ಕಾರ ಉತ್ತರ ಕೊಡುತ್ತದೆ. ನೀವಲ್ಲ ಕೊಡುವುದು. You are not the man to reply.

(ಗೊಂದಲ)

ಶ್ರೀ ಸಿ.ಪಿ.ಯೋಗೇಶ್ವರ್ :– Provoke ಮಾಡಿ ನೀವು ಮಾತನಾಡುತ್ತಿದ್ದೀರಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಕುಳಿತುಕೊಳ್ರೀ ನೀವು. ನೀವು ಆಗಲೇ ರಾಜೀನಾಮೆ ಕೊಟ್ಟು ಹೋಗಬೇಕಾಗಿತ್ತು.

ಶ್ರೀ ಸಿ.ಪಿ.ಯೋಗೇಶ್ವರ್ : – ರಾಜೀನಾಮೆ ಕೊಟ್ಟು ಯಾಕೆ ಹೋಗುತ್ತಾರೆ?. . . . .

(ಗೊಂದಲ)

ಶ್ರೀ ಸಿದ್ದರಾಮಯ್ಯ : – ನಿಮಗೆ ಮರ್ಯಾದೆ ಇದ್ದರೆ ರಾಜೀನಾಮೆ ಕೊಡಬೇಕಾಗಿತ್ತು. What is this?

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ : – ಅಧ್ಯಕ್ಷರೆ, ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಇದು ಚಾರ್ಜ್ ಷೀಟ್ ಹೌದೋ, ಅಲ್ಲವೋ ನೋಡಿ ಅಧ್ಯಕ್ಷರೆ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ :– Point of Order raise ಮಾಡಿದ್ದಾರೆ. ದಯವಿಟ್ಟು ರೂಲಿಂಗ್ ಕೊಡಿ ಅಧ್ಯಕ್ಷರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಇದು ಚಾರ್ಜ್ ಷೀಟ್ ಹೌದೋ, ಅಲ್ಲವೋ ಎಂದು ನೋಡಿ ಸ್ವಾಮಿ.

(ಈ ಹಂತದಲ್ಲಿ ಶ್ರೀ ಸಿದ್ದರಾಮಯ್ಯನವರು ತಮ್ಮ ಬಳಿ ಇದ್ದ ದಾಖಲೆಗಳನ್ನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು)

ಶ್ರೀ ಸಿದ್ದರಾಮಯ್ಯ : – Are they not charge sheet or not? ನೀವೂ ಲಾಯರ್, ನೀವೇ ನೋಡಿ. ಅದು F.I.R ರೇ ಸ್ವಾಮಿ? ಚಾರ್ಜ್ ಷೀಟ್ ಅಲ್ಲವೇ?

ಅಧ್ಯಕ್ಷರು : – ಚಾರ್ಜ್‌ಷೀಟ್.

ಶ್ರೀ ಸಿದ್ದರಾಮಯ್ಯ : – ಚಾರ್ಜ್‌ಷೀಟ್ ಅಲ್ಲವೇ? ಹೇಳಿ ಅವರಿಗೆ.

ಶ್ರೀ ಸಿ.ಪಿ.ಯೋಗೇಶ್ವರ್ :– ನಾನು ಚುನಾವಣೆಗೆ ನಿಂತಾಗ ಎಲ್ಲವನ್ನೂ ಡಿಕ್ಲೇರ್ ಮಾಡಿದ್ದೇನೆ. ನಾನು ಚುನಾವಣೆಗೆ ನಿಂತಾಗಲೇ ನನ್ನ ಮೇಲೆ ಇಂತಿಂಥ ಆಪಾದನೆಗಳಿವೆ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಇದು ಚಾರ್ಜ್ ಷೀಟ್, ಓದುತ್ತೇನೆ.

ಶ್ರೀ ಸಿ.ಪಿ.ಯೋಗೇಶ್ವರ್ :– ಅದು ಯಾವ ಡೇಟ್‌ದು ನೋಡಿ. ಅದೆಲ್ಲ ಹಳೆಯದು.

(ಗೊಂದಲ)

ಶ್ರೀ ಎಸ್.ಎ.ರಾಮದಾಸ್ :– ಅಧ್ಯಕ್ಷರೆ, you should give ruling.

(ಗೊಂದಲ)

ಅಧ್ಯಕ್ಷರು : – ಅದು ಚಾರ್ಜ್ ಷೀಟ್. There is no dispute.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಚಾರ್ಜ್ ಷೀಟ್ ಎಂದು ಆಯಿತಲ್ಲ. ಚಾರ್ಜ್‌ಷೀಟ್ ಆದ ಮೇಲೆ ಇವರು ಸರ್ಕಾರದಲ್ಲಿ ಉಳಿಯುತ್ತಾರೆ ಅಂದರೆ ಏನರ್ಥ?

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : – ಚಾರ್ಜ್ ಷೀಟ್ ಇದೆಯೋ, ಇಲ್ಲವೋ ಎನ್ನುವುದಷ್ಟೇ ಈಗ ಇದ್ದದ್ದು.

(ಗೊಂದಲ)

ಶ್ರೀ ಸಿ.ಪಿ.ಯೋಗೇಶ್ವರ್ : – ನಾನು ಚುನಾವಣೆಗೆ ನಿಲ್ಲುವಾಗಲೇ ಡಿಕ್ಲೇರ್ ಮಾಡಿಕೊಂಡಿದ್ದೇನೆ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : – Law Minister ಇದ್ದಾರೆ, Chief Minister ಇದ್ದಾರೆ, ಅವರಿಂದ ನಮಗೆ answer ಬರಲಿ.

(ಗೊಂದಲ)

SRI D.K. SHIVAKUMAR: - We don't want his explanation. ಬೇಕಾದರೆ ನೀವು ಅವರಿಗೆ defend ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಿ. ಯಾರು ಬೇಡವೆನ್ನುತ್ತಾರೆ.

(ಗೊಂದಲ)

ಶ್ರೀ ಸಿ.ಪಿ.ಯೋಗೇಶ್ವರ್ : – ಚುನಾವಣಾ ಪೂರ್ವದಲ್ಲೇ ನಾನು affidavit ಕೊಟ್ಟಿದ್ದೇನೆ. ನನ್ನ ಮೇಲೆ ಏನೇನು ಚಾರ್ಜ್‌ಸ್ ಇದೆ ಎಂದು ಹೇಳಿ ನಾನು ಚುನಾವಣೆಗೆ ಸ್ಪರ್ದಿ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ : – ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

SRI D.K.SHIVAKUMAR : - We are least bothered about it.

(ಗೊಂದಲ)

ಶ್ರೀ ಎಸ್.ಎ.ರಾಮದಾಸ್ : – ಮಾನ್ಯ ಅಧ್ಯಕ್ಷರೆ, ನಾವು Point of Order raise ಮಾಡಿದ್ದೇವೆ, ಅದಕ್ಕೇ ನಮಗೊಂದು ರೂಲಿಂಗ್ ಕೊಡಿ.

ಅಧ್ಯಕ್ಷರು : – ಆಯಿತು.

ಶ್ರೀ ಸಿದ್ದರಾಮಯ್ಯ : – ನೋಡಿ ಅಧ್ಯಕ್ಷರೆ, ಅದು ಚಾರ್ಜ್ ಷೀಟ್.

ಅಧ್ಯಕ್ಷರು : – ಅದು ಚಾರ್ಜ್ ಷೀಟ್ ಎಂದು ಒಪ್ಪಿಕೊಂಡೆ.

(ಗೊಂದಲ)

ಶ್ರೀ ಎಸ್.ಎ.ರಾಮದಾಸ್ : – ಮಾನ್ಯ ಅಧ್ಯಕ್ಷರೆ, ರೂಲಿಂಗ್ ಕೊಡಿ, ಆಮೇಲೆ ಮಾತನಾಡಲಿ.

ಶ್ರೀ ಸಿದ್ದರಾಮಯ್ಯ : – Rule 63 ರಲ್ಲಿ ಅವಕಾಶ ಕೊಡಿ ಅಥವಾ Rule 60 ನಲ್ಲಿ ಕೊಡಿ. ಅವೆರಡೂ ಒಂದಕ್ಕೊಂದು ಸಂಬಂಧ ಇರತಕ್ಕಂಥವು. Both of them should read together. ಜೊತೆಗೆ ನಿಮ್ಮ residuary powers ಉಪಯೋಗಿಸಿ ಕೊಡಿ. ಇಂಥ issues ಇರುವಾಗ, ಸರ್ಕಾರದಲ್ಲಿರುವ ಒಬ್ಬ ಮಂತ್ರಿಗಳ ಮೇಲೆ ಗುರುತರವಾದಂಥ ಆಪಾದನೆಗಳಿರುವಾಗ, fraud, forgery, misappropriation, ಇಂಥವುಗಳೆಲ್ಲವೂ ಇರುವಾಗ ಅವರು ಹೇಗೆ ಸರ್ಕಾರದಲ್ಲಿ ಇರಬೇಕು, ನೀವೇ ಹೇಳಿ.

ಶ್ರೀ ಎಸ್.ಎ.ರಾಮದಾಸ್ : – ಅಧ್ಯಕ್ಷರೆ, ರೂಲಿಂಗ್ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ : – ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ ಎನ್ನುವ ಒಂದೇ ಕಾರಣಕ್ಕೋಸ್ಕರ ಅದನ್ನು ಚರ್ಚೆ ಮಾಡಬಾರದು ಎನ್ನುವುದು ಸರಿಯಲ್ಲ. ಎಷ್ಟೋ ಸಂದರ್ಭಗಳಲ್ಲಿ ಕೋರ್ಟ್‌ನಲ್ಲಿ ಪೆಂಡಿಂಗ್ ಇರುವ ಕೇಸುಗಳನ್ನು ಕೂಡ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡುವುದಕ್ಕೆ ಬರುವುದೇ ಇಲ್ಲ ಎನ್ನುವ ಪ್ರಶ್ನೆ ಇಲ್ಲ.

ಅಧ್ಯಕ್ಷರು : – ಹಾಗೇನಿಲ್ಲ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಬರುವುದೇ ಇಲ್ಲ sub judice ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ :– ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ತಮಗೆ ತೋರಿಸುತ್ತೇನೆ. ಓಟು ಕೊಟ್ಟಿರತಕ್ಕಂಥ ಜನರಿಗೆ ತಮ್ಮನ್ನು ಆಳುತ್ತಾ ಇರತಕ್ಕಂಥವರು, ಸರ್ಕಾರದಲ್ಲಿ ಇರತಕ್ಕಂಥವರ ಬಗ್ಗೆ ಏನು ಅಭಿಪ್ರಾಯ

ಬರಬೇಕು? ಜನಗಳ ಅಭಿಪ್ರಾಯಗಳಿಗೆ ಗೌರವ ಸಲ್ಲಿಸಬೇಕು. ಆ ರೀತಿ ಗೌರವಿಸುವುದಕ್ಕೋಸ್ಕರ ತಾವು ಎತ್ತರದ ಸ್ಥಾನದಲ್ಲಿ ಕುಳಿತಿದ್ದೀರಿ. ಪತ್ರಿಕೆಯಲ್ಲಿ ಹೀಗೆ ಬಂದಿದೆ, 'C.I.D Probe indicts Yogeshwar. Charge Sheet-He has misused Rs.37 crores sites against public money' ಈ ರೀತಿಯಾದಂಥ ಆರೋಪಗಳು ಬಂದಾಗ, total morale ಹಾಳಾದಾಗ ತಾವು ಏಕೆ Provisionಗೋಸ್ಕರ ಯೋಚನೆ ಮಾಡುತ್ತೀರಿ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ವೈಯಕ್ತಿಕವಾಗಿ ನಾವು ಅವರ ಮೇಲೆ ಹೇಳುತ್ತೇವೆ ಎನ್ನುವ ಪ್ರಶ್ನೆಯಲ್ಲ. ಇನ್ನು ಮುಂದೆ ಯಾರೇ ಈ ರೀತಿಯಾದಂಥ ಕಳಂಕ ಹೊತ್ತಿರುವಂಥವರು ಸಚಿವರಾದಾಗ ಅವರಿಗೆ ಒಂದು ಪಾಠವಾಗಬೇಕು. ಈ ಬಗ್ಗೆ ನೀವು ಯಾವುದಾದರೊಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಬಹುಶ: ಈ ದೇಶದ ಇತಿಹಾಸದಲ್ಲಿ ಇಷ್ಟೊಂದು ಜನ ಕಳಂಕಿತ ಮಂತ್ರಿಗಳು ಒಂದು ಸರ್ಕಾರದಲ್ಲಿದ್ದು, ರಾಜೀನಾಮೆ ಕೊಟ್ಟಿರತಕ್ಕಂಥ ಇನ್ನೊಂದು ಉದಾಹರಣೆ ಈ ದೇಶದಲ್ಲಿಲ್ಲ. ಇನ್ನು ಮುಂದೆಯೂ ಇಂಥವರು ಬರಬಾರದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ :– 2ಜಿ ಹಗರಣದಲ್ಲಿ ಚಿದಂಬರಂರವರೂ ಕೇಂದ್ರ ಸರ್ಕಾರದಲ್ಲಿ ರಾಜೀನಾಮೆ ಕೊಡಬೇಕಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ :– ಇನ್ನು ಮುಂದೆ ಇಂಥ ವಿಚಾರಗಳು ಪ್ರಸ್ತಾಪವಾದಾಗ, ಈಗ ನೀವು ಯಾವ ರೀತಿಯಾಗಿ ಅಧಿಕಾರವನ್ನು ಚಲಾಯಿಸಿದ್ದರೀರಿ ಎನ್ನುವುದು ಮಹತ್ವವಾಗುತ್ತದೆ. ಅಂಥ ಒಂದು ತೀರ್ಮಾನ ನಿಮ್ಮಿಂದ ಬಂದರೆ ಗೊತ್ತಾಗುತ್ತದೆ. ನಿಮಗೋಸ್ಕರ ನಾವು ನಿಮ್ಮ ನೆರವಿಗೆ ಬರುತ್ತಿದ್ದೇವೆ. ನಾವು ನಿಮ್ಮ ಜೊತೆಗೆ ಇದ್ದೇವೆ. ಸಭೆಯ ಘನತೆ, ಗೌರವ ಕಾಪಾಡುವುದಕ್ಕೋಸ್ಕರ ನೀವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಸಿದ್ದರಾಮಯ್ಯ : – ಯಾವುದೇ ಸರ್ಕಾರದಲ್ಲಿ ಮೌಲ್ಯಗಳನ್ನು ಬಿಟ್ಟುಹೋಗಬೇಕೇ ಹೊರತು ಮೌಲ್ಯಗಳನ್ನು ಅಪಮೌಲ್ಯ ಮಾಡಬಾರದು.

ಶ್ರೀ ಡಿ.ಕೆ.ಶಿವಕುಮಾರ್ :– Oath ತೆಗೆದುಕೊಂಡಾಗ ಈ ನ್ಯಾಯ, ಈ ಸಂವಿಧಾನ ಎಲ್ಲವನ್ನೂ ಸಂರಕ್ಷಣೆ ಮಾಡುತ್ತೇವೆಂದು Oath ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು :– ನಾನು ಈಗ ruling ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ನೀಡಿರುವ ವಿಷಯವು ಇತ್ತೀಚಿನ ವಿಷಯವಾಗಿರುವುದಿಲ್ಲ. ಈಗ ಸದನದ ಮುಂದೆ ಆಯವ್ಯಯದ ಮೇಲೆ ಚರ್ಚೆ ನಡೆಯುತ್ತಿದೆ. ವಿಷಯವು ನ್ಯಾಯಾಲಯದ ಮುಂದೆ ಇದೆಯೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನನ್ನ ಗಮನಕ್ಕೆ ತಂದಿರುತ್ತಾರೆ. ಆದರೂ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 63ರ proviso ಅಡಿಯಲ್ಲಿ ನ್ಯಾಯಾಲಯದ ಮುಂದೆ ಇದ್ದರೂ ಚರ್ಚೆಗೆ ಅವಕಾಶ ಬೇಕು, ಕೊಡಬಹುದು ಎನ್ನುವಂಥದ್ದನ್ನೂ ನನ್ನ ಗಮನಕ್ಕೆ ತಂದಿದ್ದಾರೆ. ಆದರೆ, ಇಲ್ಲಿ ಹೇಳಿರುವಂಥ ವಿಚಾರವು ನೇರವಾಗಿ ನ್ಯಾಯಾಲಯದಲ್ಲಿ ಪ್ರಶ್ನೆ ಇರುವಂಥ ವಿಚಾರವಾಗಿರುವುದರಿಂದ ಇದನ್ನು ಯಾವುದೇ ರೀತಿಯಲ್ಲಿ ಚರ್ಚೆ ಮಾಡಿದರೆ ನಿಯಮ 62 sub rule 7ರ ಪ್ರಕಾರ sub-judice ಆಗುತ್ತದೆಂದು ಭಾವಿಸಿ ಈ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. ಮಾನ್ಯ ಸದಸ್ಯರು ಇದನ್ನು ಬೇರೆ ಸೂಚನೆಯಡಿಯಲ್ಲಿ ಕೊಟ್ಟರೆ, ಚರ್ಚೆಗೆ ಅವಕಾಶ ಕೊಡುತ್ತೇನೆ. ಬೇರೆ ನಿಯಮದಡಿ ತಂದರೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಈ ರಾಜ್ಯದಲ್ಲಿ ಕೆಟ್ಟ ಸಂಪ್ರದಾಯ.

(ಗೊಂದಲ)

ಅಧ್ಯಕ್ಷರು : – ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಡಿ.ಕೆ.ಶಿವಕುಮಾರ್ : – ನೀವು ಹೇಳಿ.

(ಗೊಂದಲ)

ಅಧ್ಯಕ್ಷರು : – ಮತ್ತೆ ವಿಷಯ ಹೇಳಿಬಿಡುತ್ತೇನೆ. Kaul and Shakdher ರವರ ಪುಸ್ತಕದ page No.546 ರಲ್ಲಿ ಬಹಳ ಸ್ಪಷ್ಟವಾಗಿ ಬಜೆಟ್ ವಿಚಾರ ಚರ್ಚೆಯಾಗುವಾಗ ಬೇರೆಯದಕ್ಕೆ ಅವಕಾಶ ಕೊಡಬಾರದೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : – ಆಯಿತು. ಬೇರೆ ನಿಯಮದಲ್ಲಿ ತನ್ನಿ.

(ಗೊಂದಲ)

ಅಧ್ಯಕ್ಷರು :– ನಿಯಮ 69ರಲ್ಲಿ ತನ್ನಿ. ಮತ್ತೆ ನಾನು ಇದನ್ನು ಪ್ರಸ್ತಾಪ ಮಾಡಿಲ್ಲ. ನೀವು ಇದಕ್ಕೆ notice ಕೊಡುವಾಗಲೂ ಒಂದು ಗಂಟೆ ಮುಂಚಿತವಾಗಿ ಕೊಡಲಿಲ್ಲ. ನಾನು ಅದನ್ನು ಹೇಳಬಾರದೆಂದು ಹೇಳಲಿಲ್ಲ. That is technical. . . .

(ಗೊಂದಲ)

ಅಧ್ಯಕ್ಷರು : – I allowed it. ಅದರ ಬಗ್ಗೆ ನಾನು ಮಾತನಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : – Please convert it into Rule 69.

ಅಧ್ಯಕ್ಷರು : – ಬೇರೆ ರೂಪದಲ್ಲಿ ಸೂಚನೆ ಕೊಡಿ.

(ಗೊಂದಲ)

ಅಧ್ಯಕ್ಷರು : – ಈಗಲೇ ಸೂಚನೆ ಕೊಡಿ, ನಾನು ಮಧ್ಯಾಹ್ನ ಅವಕಾಶ ಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ :– ತಮಗೆ discretionary power ಇದೆಯಲ್ಲಾ. Convert ಮಾಡಿ.

(ಗೊಂದಲ)

ಅಧ್ಯಕ್ಷರು : – ಆಯಿತು, calling attention ರೂಪದಲ್ಲಿ ಕೊಡಿ. ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : – ದಯಮಾಡಿ ಈಗಲೇ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : – Calling attention ನಲ್ಲಿ ಕೊಡಿ.

ಶ್ರೀ ಸಿದ್ದರಾಮಯ್ಯ : – Precedents ಇಲ್ಲವೇ? ಅಧಿವೇಶನ ನಾಳೆಗೆ ಮುಕ್ತಾಯವಾಗುತ್ತದೆ. ನಾವು ಯಾವಾಗ ಪ್ರಸ್ತಾಪ ಮಾಡುವುದು? ನಾಳೆ ಅಧಿವೇಶನ adjourn ಮಾಡಿಕೊಂಡು ಹೋಗುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್ : – ನಾವು cooperate ಮಾಡಿದ್ದೇವೆ. ಇಲ್ಲದಿದ್ದರೆ ನಾವು ಧರಣಿ ಮಾಡುತ್ತೇವೆ. ನಮಗೆ ಬೇರೆ ವಿಧಿಯೇ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : – ತಾವು ನಿಯಮ 60 ರಲ್ಲಿ ಅವಕಾಶ ಆಗುವುದಿಲ್ಲವೆಂದು ಆದೇಶ ಮಾಡಿದ್ದೀರಿ. ಅದನ್ನೇ ನಿಯಮ 69 ಕ್ಕೆ convert ಮಾಡಿ ಈಗಲೇ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಡಿ.ಕೆ.ಶಿವಕುಮಾರ್ : – ತಾವು ಅವಕಾಶ ಕೊಟ್ಟಿದ್ದರೆ ನಾವು ಇಷ್ಟು ಹೊತ್ತಿಗೆ ಮಾತನಾಡಿ ಮುಗಿಸಿಬಿಡುತ್ತಿದ್ದೆವು. We would have closed this issue. ಅನಂತರ ಸರ್ಕಾರದವರು ಏನು ಬೇಕಾದರೂ ಹೇಳಲಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : – ನಮಗೆ ನಿಯಮ ಮುಖ್ಯವಲ್ಲ. ಸಭೆಯ ಘನತೆ ಮುಖ್ಯ. ಯಾವ rule ಎನ್ನುವುದು ಮುಖ್ಯವಲ್ಲ.

ಶ್ರೀ ಸಿ.ಪಿ.ಯೋಗೇಶ್ವರ್ : – ಮಾನ್ಯ ಸಿದ್ದರಾಮಯ್ಯನವರೆ, ತಮ್ಮ ಗಮನದಲ್ಲಿರಲಿ. 2010 ರಲ್ಲಿ chargesheet ಹಾಕಿದ್ದರು.

ಅಧ್ಯಕ್ಷರು : – ಚರ್ಚೆ ಬೇಡ.

(ಗೊಂದಲ)

ಅಧ್ಯಕ್ಷರು : – ಸಚಿವರೆ, ಬೇಡ.

ಶ್ರೀ ಸಿ.ಪಿ.ಯೋಗೇಶ್ವರ್ :– ಮೊನ್ನೆಯ ಚುನಾವಣೆಗೆ ಸ್ಪರ್ಧಿಸಿದಾಗ ನಾನು ಚುನಾವಣಾ affidavit ನಲ್ಲಿ ನನ್ನ ಮೇಲಿದ್ದ chargesheet ಎಲ್ಲವನ್ನೂ ನಮೂದು ಮಾಡಿದ್ದೇನೆ. ನಾನು ಚುನಾವಣಾ ಆಯೋಗದ ಮುಂದೆ ಎಲ್ಲವನ್ನೂ ಹೇಳಿಕೊಂಡಿದ್ದೇನೆ. ಇದು ಹೊಸದಾಗಿ ಆದ chargesheet ಅಲ್ಲ. 2010 ರಲ್ಲಿ ಆದಂಥ chargesheet. ಇದಾದ ಮೇಲೆ 2011 ರಲ್ಲಿ ಚುನಾವಣೆಗೆ ನಿಂತು ಗೆದ್ದಿದ್ದೇನೆ. ಇವರು ಯಾರೂ ಆಗ question ಮಾಡಲಿಲ್ಲ. ಇವತ್ತು ಮಾನ್ಯ ಸಿದ್ದರಾಮಯ್ಯನವರು ಮತ್ತು ಜಯಚಂದ್ರರವರು ಮಾನ್ಯ ಸದಸ್ಯರ ಮಾತು ಕೇಳಿಕೊಂಡು ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದದ್ದು.

ಅಧ್ಯಕ್ಷರು : – ಸರ್ಕಾರದ ಕಡೆಯಿಂದ ಏನು ಹೇಳುತ್ತೀರಿ?

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಸಭಾಧ್ಯಕ್ಷರೆ, ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಕೂಡ ಸಂಪೂರ್ಣವಾಗಿ ಜಯಚಂದ್ರರವರು ಹೇಳಿದ್ದಕ್ಕೆ ಒಪ್ಪಿಕೊಳ್ಳುತ್ತೇನೆ. ನಾವು ರಾಜ್ಯದ ಜನತೆಗೆ ಉತ್ತರದಾಯತ್ವ ಇರುವವರು. ಆದರೆ, ಇವತ್ತು ಏನು ವಿಷಯ ತಂದಿದ್ದಾರೆ, ಇದು adjournment motion ನಲ್ಲಿ ಬರುವುದಿಲ್ಲ. ಆದರೆ, ನಾವು ಆ ಪ್ರಸ್ತಾಪಕ್ಕೆ ಯಾವುದೇ ರೀತಿ ಪ್ರಸ್ತಾಪವೇ ಬೇಡ ಎಂದು ಹೇಳುತ್ತಿಲ್ಲ. ಚರ್ಚೆಯಾಗಲಿ,

ಯಾರ ಬಗ್ಗೆ ನೀವು ಪ್ರಸ್ತಾಪ ಮಾಡಿದ್ದೀರಿ, ಆ ಸದಸ್ಯರು, ಸಚಿವರು ಕೂಡ ಉತ್ತರ ಕೊಡಲಿ, ಚರ್ಚೆಯಾಗಲಿ. ಆದರೆ, ಇವತ್ತು ಏನು rule ಅಡಿಯಲ್ಲಿ allow ಮಾಡಿ ಎಂದು ವಿಷಯ ಹೇಳಿದ್ದೀರಿ, ಅದನ್ನು ಗೌರವಿಸುತ್ತಾ, ಅದನ್ನು ಅವರು ಬೇರೆ ಸ್ವರೂಪದಲ್ಲಿ ತಂದರೆ ಖಂಡಿತ ಚರ್ಚೆಯಾಗಲಿ.

ಅಧ್ಯಕ್ಷರು : – ಆಯಿತು, ಬೇರೆ ಸ್ವರೂಪದಲ್ಲಿ ತನ್ನಿ.

ಶ್ರೀ ಡಿ.ಕೆ.ಶಿವಕುಮಾರ್ : – ಈಗಲೇ ತಾವು rule 69 ಗೆ convert ಮಾಡಿ ಅವಕಾಶ ಕೊಡಿ.

ಅಧ್ಯಕ್ಷರು :– ಈಗಲೇ ಆಗುವುದಿಲ್ಲ. ಬಜೆಟ್ ಮೇಲಿನ ಚರ್ಚೆ ಇದೆ.

ಶ್ರೀ ಡಿ.ಕೆ.ಶಿವಕುಮಾರ್ :– Half-an-hour ನಲ್ಲಿ ಚರ್ಚೆ ಮುಗಿಸುತ್ತೇವೆ.

ಅಧ್ಯಕ್ಷರು : – ಬಜೆಟ್ ಮುಗಿದ ನಂತರ ನಿಯಮ 69 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ.

ಶ್ರೀ ಡಿ.ಕೆ.ಶಿವಕುಮಾರ್ :– ನಾಳೆ ಎಂದರೆ ಬಜೆಟ್ ಮೇಲೆ reply ಇರುತ್ತದೆ.

ಶ್ರೀ ಎಸ್.ಸುರೇಶ್ ಕುಮಾರ್ :– ಇಲ್ಲ, ಇವತ್ತೇ ಬಜೆಟ್ ಪಾಸ್ ಆಗಬೇಕಿದೆ.

ಶ್ರೀ ಡಿ.ಕೆ.ಶಿವಕುಮಾರ್ :– ಅದಕ್ಕೆ ನಾವು one hour ನಲ್ಲಿ ಮಾತನಾಡಿ ಮುಗಿಸುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್ : – ಆಗುವುದಿಲ್ಲ.

ಅಧ್ಯಕ್ಷರು :– ಆಗುವುದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್ : – ನಾವು one hour ನಲ್ಲಿ ಚರ್ಚೆ ಮಾಡಿ ಮುಗಿಸುತ್ತೇವೆ.

ಅಧ್ಯಕ್ಷರು :– ಮಧ್ಯಾಹ್ನದ ಮೇಲೆ ಅವಕಾಶ ಕೊಡುತ್ತೇವೆ. ಈಗ ಬಜೆಟ್ ಮೇಲೆ ಚರ್ಚೆ ಇದೆ.

ಶ್ರೀ ಡಿ.ಕೆ.ಶಿವಕುಮಾರ್ :– ಬಜೆಟ್ ಮೇಲೆ ಮಾತನಾಡುವವರು ನಾವೇ ತಾನೆ.

ಅಧ್ಯಕ್ಷರು :– ನೀವು ಒಬ್ಬರೇ ಅಲ್ಲ, ಬಜೆಟ್ ಮೇಲೆ ಎಲ್ಲರೂ ಮಾಡತನಾಡಬೇಕೆನ್ನುತ್ತಾರೆ. ನಿಯಮ 69ರ ಅಡಿಯಲ್ಲಿ ಬೇಕಾದರೆ ಅವಕಾಶ ಕೊಡುತ್ತೇನೆ. ಈಗಲೇ ಎಂದರೆ ಆಗುವುದಿಲ್ಲ. ಬೇರೆ ರೂಪದಲ್ಲಿ ಕೊಡಿ.

ಶ್ರೀ ಡಿ.ಕೆ.ಶಿವಕುಮಾರ್ : – ಈ ಸರ್ಕಾರ ಹುಟ್ಟಿದ್ದು ಹೇಗೆ ಸ್ವಾಮಿ?

ಶ್ರೀ ಟಿ.ಬಿ.ಜಯಚಂದ್ರ :– ನಿಯಮ 60ರಡಿಯಲ್ಲಿ ಏಕೆ ತೆಗೆದುಕೊಳ್ಳಬಾರದೆಂದರೆ ಪ್ರಶ್ನೋತ್ತರವನ್ನು ಬದಿಗಿಟ್ಟು ಅದನ್ನು ಚರ್ಚೆ ಮಾಡಬೇಕೆಂದು. ಆದರೆ, ಇವತ್ತಿನ ಅಜೆಂಡಾದ ಪ್ರಕಾರ ಪ್ರಶ್ನೋತ್ತರ ಇರುವುದು ಕೊನೆಯಲ್ಲಿ. ಈಗ ಕಾರ್ಯಕಲಾಪ ಇರತಕ್ಕಂಥದ್ದು ಆಯವ್ಯಯದ ಮೇಲಿನ ಚರ್ಚೆ. ಈಗಲೇ ಚರ್ಚೆ ಮಾಡುವುದಕ್ಕೆ ತೊಂದರೆ ಏನೂ ಇಲ್ಲ.

ಅಧ್ಯಕ್ಷರು :– Kaul and Shakdher ಪುಸ್ತಕದ ಪುಟ ಸಂಖ್ಯೆ: 546 ಅನ್ನು ಓದಿ ಹೇಳಿದ್ದೇನೆ. Budget ಚರ್ಚೆಯಾಗುವಾಗ ಬೇರೆಯದಕ್ಕೆ ಅವಕಾಶವಿಲ್ಲ. ಅಷ್ಟು clear ಆಗಿ ಹೇಳಿದರೂ ಮತ್ತೆ ಮತ್ತೆ ಹೇಳಿದರೆ ಹೇಗೆ? I am very sorry. ಈಗ page No.546, I have read it, when there is a discussion on the budget no other matters shall be taken as important. ಇದನ್ನು ನಾನು ಓದಿದ್ದೇನೆ. ಅವರು ಅದನ್ನೇ point of order ಎತ್ತಿದ್ದಾರೆ. It is there. Please co-operate.

ಶ್ರೀ ಎಸ್.ಸುರೇಶ್ ಕುಮಾರ್ :– ಇದು ಸಾರ್ವಜನಿಕ ಮಹತ್ವದ್ದು ಎಂದು ನೀವು ಹೇಳುತ್ತಿದ್ದೀರಿ. ರಾಜ್ಯದ ಜನ ನೋಡುತ್ತಿದ್ದಾರೆ. ಅದರ ಬಗ್ಗೆ ಚರ್ಚೆಯಾಯಿತು. ಅದೇ ರೀತಿ ರಾಜ್ಯದ ಜನತೆಗೆ ಆಗಬೇಕಾಗಿರುವ ಬಜೆಟ್ ಕೂಡ ಮುಖ್ಯ. ಬಜೆಟ್ ಆದ ತಕ್ಷಣ Speaker ರವರು ಯಾವ time fix ಮಾಡುತ್ತಾರೋ ಆಗ ಚರ್ಚೆ ಮಾಡೋಣ.

ಅಧ್ಯಕ್ಷರು :– ಆಯಿತು. ಅದು ಆದ ತಕ್ಷಣ ಅವಕಾಶ ಕೊಡುತ್ತೇನೆ. ಸಹಕಾರ ಕೊಡಿ.

ಶ್ರೀ ಡಿ.ಕೆ.ಶಿವಕುಮಾರ್ :– ಸಹಕಾರ ಕೊಡುತ್ತೇವೆ. Very simple. ಈ ಸರ್ಕಾರ ಹುಟ್ಟಿದ್ದು ಏತಕ್ಕೆ ಸ್ವಾಮಿ? ಯಡಿಯೂರಪ್ಪನವರ ಮೇಲೆ FIR ಆದದ್ದಕ್ಕೆ ರಾಜೀನಾಮೆ ಕೊಟ್ಟರು.

ಅಧ್ಯಕ್ಷರು : – ಏಕೆ ಸುಮ್ಮನೆ ಅವರ ಹೆಸರು ಪ್ರಸ್ತಾಪ ಮಾಡುತ್ತೀರಿ?

ಶ್ರೀ ಡಿ.ಕೆ.ಶಿವಕುಮಾರ್ :– ಏತಕ್ಕೆ ಕೊಟ್ಟರು? ಕಟ್ಟಾ ಸುಬ್ರಮಣ್ಯನಾಯ್ಡು, ರಾಮಚಂದ್ರಗೌಡರು.. ಅವರು ಏಕೆ ರಾಜೀನಾಮೆ ಕೊಟ್ಟರು?

ಅಧ್ಯಕ್ಷರು :– ಇವರ ಹೆಸರನ್ನೆಲ್ಲ ಹೇಳಿದರೆ they must answer. ಇದೆಲ್ಲ ದಾಖಲೆಗೆ ಹೋಗಬಾರದು. No, it should not be taken.

(ಗೊಂದಲ)

ಅಧ್ಯಕ್ಷರು :– ಚರ್ಚೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ಆಮೇಲೆ ತೆಗೆದುಕೊಳ್ಳೋಣ. ಸಹಕಾರ ಕೊಡಿ. ಆಯಿತು convert ಮಾಡಿದ್ದೇನೆ. ಆಮೇಲೆ ತೆಗೆದುಕೊಳ್ಳೋಣ. ಈಗ ವಿತ್ತೀಯ ಕಾರ್ಯಕಲಾಪ.

2. ವಿತ್ತೀಯ ಕಾರ್ಯಕಲಾಪ

2012–13 ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ: ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ 2ನೇ ಕೃಷಿ ಬಜೆಟ್ ಮಂಡಿಸಿದ್ದಾರೆ. 2011–12ರಲ್ಲಿ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಯಡಿಯೂರಪ್ಪನವರು ಮೊದಲನೇ ಕೃಷಿ ಬಜೆಟ್ ಮಂಡಿಸಿ 16500 ಕೋಟಿ ರೂಪಾಯಿಗಳನ್ನು ಕೃಷಿ ವಲಯಕ್ಕೆ ಇಟ್ಟಿದ್ದರು. 2012–13ರಲ್ಲಿ ಸುಮಾರು 19 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳ ಕೃಷಿ ಬಜೆಟ್ ಮಂಡಿಸಿದ್ದಾರೆ. ಈ ಎರಡೂ ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಯಾವ ರೀತಿ ಆದ್ಯತೆ ಇದೆ? ಈ ಸರ್ಕಾರ ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದೆ. ಆದರೆ, ಇವತ್ತು ರೈತರು ಯಾವ ರೀತಿಯ ಸಂಕಷ್ಟದಲ್ಲಿದ್ದಾರೆನ್ನುವುದು ತಮ್ಮ ಗಮನಕ್ಕೆ ತರಬೇಕಾಗಿದೆ. ಸರ್ಕಾರ, ಸುಮಾರು 125 ತಾಲ್ಲೂಕುಗಳು ಬರಗಾಲ ಪೀಡಿತ ಎಂದು ಘೋಷಣೆ ಮಾಡಿದೆ. ಆ 125 ತಾಲ್ಲೂಕುಗಳಲ್ಲಿ ಬರಗಾಲವಿದ್ದರೂ ಸಹ ಈ ಸರ್ಕಾರ ಯಾವ ಮಟ್ಟಕ್ಕೆ ಕೃಷಿ ವಲಯಕ್ಕೆ ಆದ್ಯತೆ ನೀಡಿದೆ ಎಂಬುದನ್ನು ನಾನು ಹೇಳಬೇಕಾಗಿಲ್ಲ. ರಾಜ್ಯದ ಮುಖ್ಯ ಕಾರ್ಯದರ್ಶಿಯವರು ಪ್ರತಿ ತಿಂಗಳು KDP ಸಭೆ ಮಾಡುತ್ತಾರೆ. ಈ ಸಭೆಯ ಒಂದು ಭಾಗವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ದಿನಾಂಕ: